ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 | ಸಂಚಿಕೆ 5 | ಜನವರಿ 31, 1982 | ಬೆಲೆ : 60 ಪೈ

ಆಕಾಶವಾಣಿ ನಿಲಯದ ಎದುರು

ಪ್ರತಿಭಟನಾ ಪ್ರದರ್ಶನ

ಜನವರಿ 19ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಸಮಯದಲ್ಲಿ ಆಕಾಶವಾಣಿಯವರು ಪಕ್ಷಪಾತದಿಂದ ವರ್ತಿಸಿರುವದನ್ನು, ಮುಷ್ಕರವನ್ನು ವಿಫಲವೆಂದು ಬಣ್ಣಿಸಿರುವದನ್ನು ಪ್ರತಿಭಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯಕರ್ತರು 26-1-82ರಂದು ಬೆಂಗಳೂರು ಆಕಾಶವಾಣಿ ಕೇಂದ್ರದ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಮಾಧ್ಯಮವನ್ನು ದುರುಪಯೋಗ ಪಡಿಸಿಕೊಂಡು, ಆಕಾಶವಾಣಿಯು ಆಳುವ ಯಂತ್ರದ ಕೈಗೊಂಬೆಯಾಗಿದ್ದನ್ನು ಪ್ರತಿಭಟಿಸಿ ನಿಲಯದ ಡೈರೆಕ್ಟರಿಗೆ ಮನವಿ ಸಲ್ಲಿಸಲಾಯಿತು.

ಈ ಪ್ರತಿಭಟನಾ ಪ್ರದರ್ಶನದಲ್ಲಿ ಸುಮಾರು 500ಜನ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಪಿ. ಕೆ. ಸುಬ್ರಮಣಿಯವರ ನೇತೃತ್ವದಲ್ಲಿ ನಿಯೋಗವೊಂದು ಡೈರೆಕ್ಟರರನ್ನು ಭೇಟಿಯಾಗಿತ್ತು.

ನಂತರ ನಿಲಯದ ಎದುರು ನಡೆದ ಸಭೆಯನ್ನುದ್ದೇಶಿಸಿ ಕಾಂ. ಪಿ. ಕೆ. ಸುಬ್ರಮಣಿ ಮಾತನಾಡುತ್ತಾ ಸಮೂಹ ಮಾಧ್ಯಮವನ್ನು ದುರುಪಯೋಗ ಪಡಿಸಿಕೊಳ್ಳುವದರ ಕುರಿತು ಸರಕಾರವನ್ನು ಮತ್ತು ನಿಲಯದ ಅಧಿಕಾರಿಗಳನ್ನು ಎಚ್ಚರಿಸಿದರು. ಸುಳ್ಳು ಪ್ರಚಾರವನ್ನು ನಿಲ್ಲಿಸದಿದ್ದಲ್ಲಿ ತೀವ್ರ ಹೋರಾಟಕ್ಕಿಳಿಯಬೇಕಾದೀತೆಂದು ಕಾಂ. ಸುಬ್ರಮಣಿ ತಿಳಿಸಿದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಟಿ. ಎಸ್. ಅನಂತ ರಾವ್ ಅವರು ಆಕಾಶವಾಣಿಯ ಸುಳ್ಳುಗಳಿಂದ ಕೂಡಿದ ಪ್ರಚಾರಕ್ಕೆ ಕಿವಿಗೊಡದಂತೆ ಸಾರ್ವಜನಿಕರನ್ನು ಕೋರಿದರು.

ಈ ಪ್ರತಿಭಟನಾ ಪ್ರದರ್ಶನ ನಡೆಸುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕರೆ ನೀಡಿತ್ತು.

ದಿನಾಂಕ 25ರಂದು ವಿದ್ಯಾರ್ಥಿ ಯುವಜನ ಹೋರಾಟ ಸಮಿತಿಯ ಕಾರ್ಯಕರ್ತರೂ ಆಕಾಶವಾಣಿಯ ಪಕ್ಷಪಾತ ವರ್ತನೆ ಖಂಡಿಸಿ ಮುಕಪ್ರದರ್ಶನ ನಡೆಸಿದ್ದರು. ಈ ಮುಕಪ್ರದರ್ಶನಕಾರರನ್ನು ಪೋಲೀಸರು ಬಂಧಿಸಿದ್ದರು.

ಮೈಸೂರು ನಿಲಯದ ಎದುರೂ ಪಕ್ಷದ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಸುಮಾರು 200 ಕಾರ್ಯಕರ್ತರು ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದ್ದಾರೆ.

ದಿನಾಂಕ 26ರಂದು ರಾಜ್ಯಸಮಿತಿಯ ಕರೆಯಂತೆ ಭದ್ರಾವತಿ ಆಕಾಶವಾಣಿ ನಿಲಯದೆದುರೂ ಪ್ರತಿಭಟನೆ ನಡೆಸಲಾಯಿತು. ಪಕ್ಷದ ಶಿವಮೊಗ್ಗಾ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಈ ಪ್ರತಿಭಟನಾ ಪ್ರದರ್ಶನ ನಡೆಯಿತು.

ಭದ್ರಾವತಿ ನಗರದಿಂದ ಸುಂದರ ಹಳ್ಳಿಯಲ್ಲಿರುವ ಆಕಾಶವಾಣಿಯವರೆಗೆ ಸುಮಾರು 50 ಕಾರ್ಯಕರ್ತರು ಮೆರವಣಿಗೆ ಹೊರಡಿಸಿದ್ದರು. ಕಾಂ. ಚಿಕ್ಕಹೂಕಂಟ್ಟಿ, ಮೊಹಮ್ಮದ್ ರಫೀ, ನರಸಿಂಹೇಗೌಡ ಮತ್ತು ಕಾಂ. ಶಿವಶಂಕರ್ ಮೆರವಣಿಗೆಯ ನಾಯಕತ್ವವನ್ನು ವಹಿಸಿದ್ದರು.

ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗಾದಲ್ಲೂ ಆಕಾಶವಾಣಿ ನಿಲಯದೆದುರು ಮುಕಪ್ರದರ್ಶನ ನಡೆಸಿರುವದಾಗಿ ವರದಿಯಾಗಿದೆ.

●

ಕಾಂ. ಜೈಪಾಲ್‌ಸಿಂಗ್ ನಿಧನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯ ಕಾಂ. ಜೈಪಾಲ್‌ಸಿಂಗ್‌ರು ದಿನಾಂಕ 25ರಂದು ಹೃದಯಾಘಾತದಿಂದ ವಿಜಯವಾಡಾದಲ್ಲಿ ನಿಧನರಾದ ಆಘಾತಕರ ವಾರ್ತೆ ಬಂದಿದೆ. ಕಾಂ. ಜೈಪಾಲ್‌ಸಿಂಗ್‌ರು ಪಕ್ಷ ಅಖಿಲಭಾರತ 11ನೇ ಸಮ್ಮೇಳನಕ್ಕೆ ವಿಜಯವಾಡಾಕ್ಕೆ ಆಗಮಿಸಿದ್ದರು.

65 ವರ್ಷ ವಯಸ್ಸಿನ ಕಾಂ. ಜೈಪಾಲ್‌ಸಿಂಗ್‌ರು ದೆಹಲಿ ಪ್ರದೇಶ ಸಮಿತಿಯ ಕಾರ್ಯದರ್ಶಿಯೂ ಆಗಿದ್ದರು.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಸೈನ್ಯದಲ್ಲಿ ಮೇಜರ್ ಆಗಿದ್ದ ಕಾಂ. ಜೈಪಾಲ್‌ಸಿಂಗ್ ಹೊರಗೆ ಬಂದಮೇಲೆ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಕ್ರೂರವಾದ ಜಮೀನ್ದಾರೀ ಪದ್ಧತಿಯನ್ನು ವಿರೋಧಿಸಿ ತೆಲಂಗಾಣಾದಲ್ಲಿ ನಡೆದ ವಿರೋಚಿತ ರೈತ ಸಂಗ್ರಾಮದಲ್ಲಿ ಕಾಂ. ಜೈಪಾಲ್‌ಸಿಂಗ್ ಅಗ್ರಪಾತ್ರ ವಹಿಸಿದ್ದರಲ್ಲದೇ ಗೆರಿಲ್ಲಾ ಕಾರ್ಯಾಚರಣೆಯ ಅಗ್ರಣಿಯಾಗಿದ್ದರು.

ಕಾಂ. ಜೈಪಾಲ್‌ಸಿಂಗ್‌ರ ಹಠಾತ್ ನಿಧನದಿಂದಾಗಿ ಸಮ್ಮೇಳನಕ್ಕೆ ರಾಷ್ಟ್ರದ ಎಲ್ಲೆಡೆಗಳಿಂದ ಆಗಮಿಸಿದ ಪ್ರತಿನಿಧಿಗಳು ದಿಗ್ಭ್ರಾಂತರಾಗಿದ್ದರು. ಕಾಂ. ಜೈಪಾಲ್‌ಸಿಂಗ್‌ರ ನಿಧನದ ನಿಮಿತ್ತ ದಿನಾಂಕ 26ರಂದು ಬೆಳಿಗ್ಗೆ 10 ಘಂಟೆಗೆ ಪ್ರಾರಂಭವಾಗಬೇಕಿದ್ದ ಸಮ್ಮೇಳನ ಸಾಯಂಕಾಲದವರೆಗೆ ಮುಂದೂಡಲಾಯಿತು.

26ರಂದು ಬೆಳಿಗ್ಗೆ ಕೃಷ್ಣಾತೀರದಲ್ಲಿ ಜರುಗಿದ ಕಾಂ. ಜೈಪಾಲ್‌ಸಿಂಗ್‌ರ ಅಂತಿಮ ಸಂಸ್ಕಾರದಲ್ಲಿ ದುಃಖಿತ ಪ್ರತಿನಿಧಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರೂ ಪಾಲ್ಗೊಂಡಿದ್ದರು. ನಂತರ ನಡೆದ ಶೋಕ ಸಭೆಯನ್ನುದ್ದೇಶಿಸಿ ಕಾಂ. ಪಿ. ಸುಂದರಯ್ಯ, ಇ. ಎಂ. ಎಸ್. ನಂಬೂದ್ರಿಪಾಡ್‌ರು ಮಾತನಾಡಿ ಕಾಂ. ಜೈಪಾಲ್‌ಸಿಂಗ್‌ರ ಕಾರ್ಯಕ್ಷಮತೆ, ತ್ಯಾಗವನ್ನು ಪ್ರಶಂಸಿಸಿ ಶ್ರದ್ಧಾಂಜಲಿ ಅರ್ಪಿಸಿದರು. ಕಾಂ. ಜೈಪಾಲ್‌ಸಿಂಗ್‌ರ ನಿಧನದ ಸಮಯದಲ್ಲಿ ಅವರ ಪತ್ನಿ, ಪುತ್ರರು ಅವರೊಟ್ಟಿಗಿದ್ದರು.

ದುಡಿಯುವವರ್ಗದ ಜನರಿಗಾಗಿ ಅವಿರತ ಶ್ರಮಿಸಿದ ಪಕ್ಷದ ನೆಚ್ಚಿನ ಮುಂದಾಳು ಕಾಂ. ಜೈಪಾಲ್‌ಸಿಂಗ್‌ರ ನಿಧನಕ್ಕೆ ಐಕ್ಯರಂಗ ತೀವ್ರ ದುಃಖ ವ್ಯಕ್ತಪಡಿಸುತ್ತದೆ. ಅವರ ಕುಟುಂಬದ ಸಂತಾಪದಲ್ಲಿ ಪಾಲ್ಗೊಳ್ಳುತ್ತಿದೆ.

●

ಐ.ಎಲ್.ಓ.ಗೆ ಕಾರ್ಮಿಕ ಸಂಘಗಳ ದೂರು

ಎಂಟು ಕೇಂದ್ರ ಕಾರ್ಮಿಕ ಸಂಘಟನೆಗಳು– ಎ. ಐ. ಟಿ. ಯು. ಸಿ., ಸಿ. ಐ. ಟಿ. ಯು., ಎಚ್. ಎಮ್. ಎಸ್., ಬಿ. ಎಮ್. ಎಸ್., ಐ. ಎನ್. ಟಿ. ಯು. ಸಿ., ಯು. ಟಿ. ಯು. ಸಿ. ಯು. ಟಿ. ಯು. ಸಿ. (ಲೆನಿನ್ ಸರಣಿ) ಹಾಗೂ ಟಿ. ಯು. ಸಿ. ಸಿ. ಡಿಸೆಂಬರ್ 14ರಂದು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ. ಎಲ್. ಓ.) ಗೆ ಅರ್ಪಿಸಿದ ಜಂಟೀ ಮನವಿಯಲ್ಲಿ ಐ. ಎಲ್. ಓ. 1948ರ ಸಮಾವೇಶ ಸಂಖ್ಯೆ 87ರಲ್ಲಿ ಹಾಕಿಕೊಟ್ಟ ಸಂಘಟನೆಯ ಹಕ್ಕನ್ನು ರಕ್ಷಿಸಲು ಸಂಘ ಕಟ್ಟುವ ಸ್ವಾತಂತ್ರ್ಯ ಹಾಗೂ 1949ರ ಸಮಾವೇಶ 98ರಲ್ಲಿ ಹಾಕಿಕೊಟ್ಟ "ಸಾಮೂಹಿಕ ಚೌಕಾಸಿ ಸಂಘಟಿಸುವ ಹಕ್ಕು" ಈ ಎರಡೂ ಅಂತರಾಷ್ಟ್ರೀಯ ಮಾನದಂಡಗಳ ತೀವ್ರ ಉಲ್ಲಂಘನೆ ಭಾರತದಲ್ಲಿ ಕಳೆದ ಒಂದೂವರೆ ವರ್ಷಗಳಿಂದ ನಡೆಯುತ್ತಿವೆ ಎಂದು ದೂರಿವೆ. ಆಳುವ ಪಕ್ಷದ ಸಂಘಟನೆಯೊಂದನ್ನು ಬಿಟ್ಟು ಉಳಿದೆಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಈ ಮನವಿಗೆ ಸಹಿಹಾಕಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಮನವಿಯಲ್ಲಿ ರಾಷ್ಟ್ರೀಯ ಭದ್ರತಾ ಕಾನೂನು ಹಾಗೂ ಅಗತ್ಯ ಸೇವಾ ನಿರ್ವಹಣಾ ಕಾನೂನು ಈ ಎರಡು ಕರಾಳ ಶಾಸನಗಳನ್ನು ಉಲ್ಲೇಖಿಸಲಾಗಿದೆ; ಎನ್. ಎಸ್. ಎ. ಪ್ರಕಾರ ಕಾರ್ಮಿಕ ನಾಯಕರನ್ನು ಸಂಘಟನೆಯ ಚಟುವಟಿಕೆಗಳಿಗಾಗಿ ಬಂಧಿಸಿರುವುದರ ವಿವರ ನೀಡಲಾಗಿದೆ; ಇ. ಎಸ್. ಎಂ. ಎ. ಕಾರ್ಮಿಕರನ್ನು ಸದಾ ಬೆದರಿಕೆಯ ವಾತಾವರಣದಲ್ಲಿ ಇರಿಸುವುದಲ್ಲದೆ ಸರಕಾರಕ್ಕೆ ವ್ಯಾಪಕ ಅಧಿಕಾರ ನೀಡಿ ವಾಸ್ತವದಲ್ಲಿ ಸಾಮೂಹಿಕ ಚೌಕಾಸಿಯ ಹಕ್ಕು ಮಾತ್ರವಲ್ಲದೆ ಸಂಘಟನೆಯ ಹಕ್ಕನ್ನೇ ಕಸಿದುಕೊಂಡಂತಾಗಿದೆ ಎಂದು ತಿಳಿಸಲಾಗಿದೆ. ಈ ಎರಡು ಕಾನೂನುಗಳ ದುರುಪಯೋಗದಿಂದ ಹೇಗೆ ಸಂಘಟನಾ ಸ್ವಾತಂತ್ರ್ಯ ಹಾಗೂ

[ಕಡೇ ಪುಟ ನೋಡಿ]

ವಿಜಯವಾಡಾದಲ್ಲಿ 11ನೇ ಸಮ್ಮೇಳನ ಆರಂಭ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ಅಖಿಲಭಾರತ ಸಮ್ಮೇಳನವು ಆಂಧ್ರಪ್ರದೇಶದ ವಿಜಯವಾಡಾದಲ್ಲಿ ಜ. 26ರಂದು ಪ್ರಾರಂಭವಾಗಿದೆ. 26ರ ಬೆಳಿಗ್ಗೆ ಆರಂಭವಾಗಬೇಕಿದ್ದ ಮಹಾಸಮ್ಮೇಳನ ಕಾಂ. ಜೈಪಾಲ್‌ಸಿಂಗ್‌ರ ಹಠಾತ್ ನಿಧನದಿಂದಾಗಿ ಸಾಯಂಕಾಲ 5 ಘಂಟೆಯವರೆಗೆ ಮುಂದೂಡಲ್ಪಟ್ಟಿತ್ತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್‌ರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನ ಆರಂಭವಾಯಿತು.

ವಿಜಯವಾಡಾದ ಮುನಸಿಪಲ್ ಸಭಾಂಗಣದಲ್ಲಿ ಸಮ್ಮೇಳನ ಸಮಾವೇಶಗೊಂಡಿದೆ. ಸಮ್ಮೇಳನ ನಡೆಯುವ ಸ್ಥಳಕ್ಕೆ 'ಕಾಂ. ಎ. ಬಾಲಸುಬ್ರಮಣ್ಯಂ ನಗರ' ಎಂದು ಹೆಸರಿಸಲಾಗಿದೆ.

ಸಮ್ಮೇಳನದಲ್ಲಿ ಸುಮಾರು 600ಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

[ಕಡೇ ಪುಟ ನೋಡಿ]

ಗಣತಂತ್ರ ದಿನಕ್ಕೆ ಒಂದು ಚಿಂತನೆ

ಸ್ವಾತಂತ್ರ್ಯದ ಮೂರು ದಶಕಗಳ ನಂತರವೂ ಕೂಡಾ ಶ್ರೀಮಂತ ಹಾಗೂ ಬಡವರ ನಡುವಿನ ಅಂತರ ಇನ್ನಷ್ಟು ಹೆಚ್ಚಾಗಿದೆ. ದಾರಿದ್ರ್ಯರೇಖೆಯ ಕೆಳಗಣ ಜನರ ಸಂಖ್ಯೆಯೂ ಹೆಚ್ಚಿದೆ. ಇದಕ್ಕೆ ಕಾರಣ ಆಮೂಲಾಗ್ರ ಭೂಸುಧಾರಣೆ ತರಲು ಇನ್ನೂ ಇಚ್ಛೆಯಿಲ್ಲದಿರುವುದೂ ಹಾಗೂ ನಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಗುತ್ತೇದಾರಿ ಬಂಡವಾಳಶಾಹಿಗಳು ಹೊಂದಿರುವ ದುಷ್ಟ ಬಿಗಿ ಹಿಡಿತ. ಬಂಡವಾಳಶಾಹೀ ದೇಶಗಳಿಗೆ ತೆರಬೇಕಾದ ಸಾಲ ನಮ್ಮ ಆರ್ಥಿಕ ಸ್ವಾತಂತ್ರ್ಯಕ್ಕೆ ಬೆದರಿಕೆಯೊಡ್ಡಿದೆ.

ವಿವಿಧ ಪಂಗಡಗಳು ಹಾಗೂ ಜನಾಂಗಗಳ ಜನರಿಂದ ಕೂಡಿದ ನಮ್ಮ ದೇಶದಲ್ಲಿ ಸಾಮಾಜಿಕ – ಆರ್ಥಿಕ ಅವನತಿಯ ವಾತಾವರಣದಲ್ಲಿ ದೇಶದ ಸಮಗ್ರತೆ ಗಂಡಾಂತರದಲ್ಲಿದೆ. ಪ್ರತ್ಯೇಕತಾವಾದೀ, ಕೋಮುವಾದೀ ಹಾಗೂ ಪ್ರಾಂತೀಯತಾವಾದೀ ಶಕ್ತಿಗಳು ಹೊಂಚು ಹಾಕುತ್ತಿವೆ. ಸಾಮ್ರಾಜ್ಯಶಾಹೀ ಶಕ್ತಿಗಳು ಅವುಗಳ ಬೆಂಬಲಕ್ಕಿವೆ.

ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವಿಪತ್ತಿನಲ್ಲಿದೆ. ಸರ್ವಾಧಿಕಾರೀ ಆಳ್ವಿಕೆ ಸ್ಥಾಪಿಸುವ ಪ್ರಯತ್ನವಾಗಿ ದುಡಿಯುವ ಜನತೆಯ, ಕಾರ್ಮಿಕ ಸಂಘಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಕೈಹಾಕಲಾಗುತ್ತಿದೆ. ನ್ಯಾಯ ವ್ಯವಸ್ಥೆ ಹಾಗೂ ಸಂವಿಧಾನವನ್ನು ಒಳಗಿಂದೊಳಗೇ ತಲೆಕೆಳಗು ಮಾಡುವ ಪ್ರವೃತ್ತಿ ಕಾಣಬರುತ್ತಿದೆ. ಎಲ್ಲಾ ವಿರೋಧಿ ಅಭಿಪ್ರಾಯಗಳನ್ನು ಹೊಸಕಿಹಾಕುವ ಪ್ರಯತ್ನಗಳು ಆರಂಭವಾಗಿವೆ.

ನಮ್ಮ ಸ್ವಾತಂತ್ರ್ಯ, ರಾಷ್ಟ್ರೀಯ ಸಮಗ್ರತೆ ಹಾಗೂ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳಲು ಈ ಎಲ್ಲಾ ಅಪವಿತ್ರ ಶಕ್ತಿಗಳ ವಿರುದ್ಧ ನಾವು ಜಾಗ್ರತರಾಗಿರೋಣ ಹಾಗೂ ಸ್ಪಷ್ಟ ಅಭಿವ್ಯಕ್ತಿ ಕೊಡೋಣ - ಹೀಗೆಂದು ಈ ಗಣತಂತ್ರ ದಿನದಂದು ನಾವು ನಿರ್ಧರಿಸೋಣ.

01/A/82

ಪಶ್ಚಿಮ ಬಂಗಾಳ ಸರ್ಕಾರ

ಪ್ರಚಂಡ ಯಶಸ್ವಿಯಾದ ಸಾರ್ವತ್ರಿಕ ಮುಷ್ಕರ

ರಾಷ್ಟ್ರೀಯ ಆಂದೋಲನ ಸಮಿತಿಯು ಕರೆಯಂತೆ ಜನವರಿ 19ರಂದು ರಾಷ್ಟ್ರದಾದ್ಯಂತ ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಕರ್ನಾಟಕದಲ್ಲೂ ಸಂಪೂರ್ಣ ಯಶಸ್ವಿಯಾದ ವರದಿಗಳು ಬಂದಿವೆ. ಮುಷ್ಕರಕ್ಕೆ ಒಂದುವಾರದ ಮೊದಲಿನಿಂದಲೂ ರೇಡಿಯೋ ಮತ್ತಿತರ ಮಾಧ್ಯಮಗಳ ಮೂಲಕ ಸರಕಾರದ ನೇತಾರರು ಮುಷ್ಕರದ ಕರೆಯನ್ನು ವಿಫಲಗೊಳಿಸುವಂತೆ ನೀಡಿದ ಕರೆಯನ್ನು ರಾಜ್ಯದ ಸಮಸ್ತ ಕಾರ್ಮಿಕವರ್ಗ ವಿಫಲಗೊಳಿಸಿದೆ. ಜನವರಿ 19ರ ಮುಷ್ಕರ ಯಶಸ್ಸು ಕಾರ್ಮಿಕವರ್ಗದ ಅದಮ್ಯ ಚೇತನದ ಸಂಕೇತವಾಗಿತ್ತು.

ರಾಜ್ಯದ ಮುಖ್ಯಮಂತ್ರಿ ಗುಂಡೂರಾವ್, ಕಾಂಗ್ರೆ ಕರ್ನಾಟಕ ಘಟಕದ ಅಧ್ಯಕ್ಷ ರಾಠೋಡ್, ಪೋಲೀಸ್ ವರಿಷ್ಠರು, ಕಾಂಗ್ರೆ ಶಾಸಕರು ಮತ್ತು ಇಂಟಕ್ಕಿನ ಖಾನ್ ಮೊದಲಾದವರು ಮುಷ್ಕರ ವಿಫಲಗೊಳ್ಳುವಂತೆ ಮಾಡಲು ಯತ್ನಿಸಿದ್ದರು. ಆದರೂ ಜನವರಿ 19ರ ಮಹಾಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ. ಅನೇಕ ಕಡೆ ಮುಷ್ಕರ ಬೆಂಬಲಿಸಿ ಬಂದ್ ಸಹ ನಡೆದಿದೆ. ನಮಗೆ ತಲುಪಿದ ವರದಿಗಳು ಇಂತಿವೆ.

ಬೆಂಗಳೂರು

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರೂ ಸೇರಿದಂತೆ ಎಲ್ಲಾ ಕಾರ್ಖಾನೆಗಳ ಕಾರ್ಮಿಕರು ಜ. 19ರ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಇಂಟಕ್(ಐ)ನ ನೇತೃತ್ವದಲ್ಲಿರುವ ಕೆಲವೇ ಕಾರ್ಖಾನೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕೆಲಸಕ್ಕೆ ಹಾಜರಾಗಿದ್ದರು.

ಎಲ್ಲ ಕೈಗಾರಿಕೆಗಳು, ಬ್ಯಾಂಕ್, ಜೀವವಿಮೆಗಳಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ. ಬಂದ್‌ಗೆ ಕರೆ ನೀಡಿರದಿದ್ದರೂ ಬೆಂಗಳೂರು ನಗರ ಭಾಗಶಃ ಬಂದ್ ಆಚರಿಸಿತು. ನಗರದ ಜನನಿಬಿಡ ರಸ್ತೆಗಳು ಪೂರ್ಣ ನಿರ್ಜನವಾಗಿದ್ದವು. ಕೈಗಾರಿಕಾ ಪ್ರದೇಶಗಳಂತೂ ಬಿಕೋ ಎನ್ನುತ್ತಿದ್ದವು. ಶೈಕ್ಷಣಿಕ ಸಂಸ್ಥೆಗಳೂ ಬಂದ್ ಆಗಿದ್ದವು, ರಾಜ್ಯ ಸರಕಾರಿ ನೌಕರರೂ ಕಪ್ಪು ಪಟ್ಟಿ ಧರಿಸಿ (ಮುಷ್ಕರಕ್ಕೆ ಬೆಂಬಲ ಸೂಚಿಸಿ) ಕೆಲಸಕ್ಕೆ ಹಾಜರಾಗಿದ್ದರು.

ಪೋಲೀಸ್ ರಕ್ಷಣೆಯಲ್ಲಿ ಸಿಟಿಬಸ್‌ಗಳು ಸಂಚರಿಸಿದರೂ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಅತ್ಯಂತ ಕಡಿಮೆ ಇತ್ತು. ಶೇ. 90ರಷ್ಟು ಆಟೋ ಚಾಲಕರು ಮುಷ್ಕರದ ಕರೆಗೆ ಓಗೊಟ್ಟಿದ್ದರು.

ಮುಷ್ಕರಕ್ಕೆ ಹದಿನೈದು ದಿನ ಮೊದಲೇ ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಸಮಿತಿ ಬೆಂಗಳೂರು ನಗರದಲ್ಲಿ ಅನೇಕ ವಿಭಾಗಾವಾರು ಬಹಿರಂಗ ಸಭೆಗಳನ್ನು ನಡೆಸಿ ಮುಷ್ಕರಕ್ಕೆ ಸಾರ್ವಜನಿಕರ ಬೆಂಬಲ ಕೋರಿತ್ತು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕರಪತ್ರಗಳನ್ನು ಮುದ್ರಿಸಲಾಗಿತ್ತು.

ಎನ್.ಸಿ.ಸಿ. ಕರ್ನಾಟಕ ಘಟಕದ ಆಶ್ರಯದಲ್ಲೂ ಕೆಲವು ಬಹಿರಂಗ ಸಭೆಗಳು, ಪತ್ರಿಕಾಗೋಷ್ಠಿಗಳು ನಡೆದಿದ್ದವು.

ಮುಷ್ಕರದ ದಿನ ಬೆಳಿಗ್ಗೆಯಿಂದಲೇ ಬೆಂಗಳೂರು ನಗರ ಮತ್ತು ಜಿಲ್ಲೆಯ ಕೆಲವು ಭಾಗಗಳಲ್ಲಿ ನಿಷೇಧಾಜ್ಞೆ ಹೇರಲಾಗಿತ್ತು. ಜನವರಿ 15ರಿಂದಲೇ ಬಹಿರಂಗ ಸಭೆಗಳಿಗೆ ಅನುಮತಿ ದೊರಕಲಿಲ್ಲ. ಪೋಲೀಸ್ ಪಡೆ ದಮನಕ್ಕೆ ಸಿದ್ಧವಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದೇ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ.

ಜನವರಿ 18ರಂದೇ ಮುಂಜಾಗರೂಕತಾ ಕ್ರಮವಾಗಿ ಸಹಸ್ರಾರು (ಸುಮಾರು 3000) ಜನರನ್ನು ಬಂಧಿಸಲಾಗಿತ್ತು. ಬಂಧಿತರಲ್ಲಿ ಕಾಂ. ಮೈಕೆಲ ಫರ್ನಾಂಡೀಸ್, ಆಲಂಪಳ್ಳಿ ವೆಂಕಟರಾಮ್, ಎಂ. ಡಿ. ನಟರಾಜ್ ಮತ್ತು ಬೆಂಗಳೂರು ಜಿಲ್ಲಾ ಸಿ. ಐ. ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಂ ಸೇರಿದ್ದರು.

ಬೆಂಗಳೂರಿನ ಯಶವಂತಪುರ ಮತ್ತಿತರ ವಿಭಾಗಗಳಲ್ಲಿ ಕೆಲವು ಸಿ.ಐ.ಟಿ.ಯು. ಕಾರ್ಯಕರ್ತರನ್ನು ಬಂಧಿಸಲಾಗಿತ್ತು.

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಸಂಪೂರ್ಣ ಬಂದ್ ನಡೆಯಿತು. ಬೆಳಿಗ್ಗೆ ದೊಡ್ಡಬಳ್ಳಾಪುರದಲ್ಲಿ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ. ಮೀಗುಮಾಳಪ್ಪ ಮತ್ತಿತರರು ಮಾತನಾಡಿದರು.

ದ. ಕ. ಜಿಲ್ಲೆ

ಜ. 19ರ ಸಾರ್ವತ್ರಿಕ ಮುಷ್ಕರ ದ.ಕ. ಜಿಲ್ಲೆಯಲ್ಲಿ ಜನತೆಯ ಬೆಂಬಲದೊಂದಿಗೆ ಯಶಸ್ವಿಯಾಗಿದೆ ಮಾತ್ರವಲ್ಲ ಅಂದು ವ್ಯಾಪಾರ ಸಂಸ್ಥೆಗಳೂ ಮುಚ್ಚಲ್ಪಟ್ಟು ಬಂದ್ ಆಗಿ ಮಾರ್ಪಟ್ಟಿತು.

ಜನವರಿ 19ರಂದು ಎರಡೂವರೆ ಲಕ್ಷ ಬೀಡಿಕಾರ್ಮಿಕರು, ಸಹಸ್ರಾರು ಹಂಚು ಕಾರ್ಮಿಕರು, ಗೋಡಂಬಿ, ಅಡಿಕೆ, ಮಂಗಳೂರು ಹಳೇ ಬಂದರದ ಕಾರ್ಮಿಕರು, ಪ್ಲೈವುಡ್, ಬಿಲ್ಡಿಂಗ್ ಕಾರ್ಮಿಕರು, ಬ್ಯಾಂಕ್ ಮತ್ತು ಎಲ್ಲೈಸಿ ಕಾರ್ಮಿಕರು ಈ ಮಹಾಮುಷ್ಕರದಲ್ಲಿ ಪಾಲ್ಗೊಂಡಿದ್ದು ಮಾತ್ರವಲ್ಲ ಇತರ ಸಣ್ಣಪುಟ್ಟ ಕೈಗಾರಿಕೆಗಳು, ವ್ಯಾಪಾರಿ ಸಂಸ್ಥೆಗಳು, ಶಾಲಾ ಕಾಲೇಜುಗಳು ಬಂದಾಗಿದ್ದವು. ಮಂಗಳೂರಿನಲ್ಲಿ ಆಟೋ ರಿಕ್ಷಾ, ಸರ್ವೀಸ್, ಸಿಟಿಬಸ್‌ಗಳೂ ಅಂದು ಬೀದಿಗಿಳಿಯಲಿಲ್ಲ.

ಕುಂದಾಪುರ, ಉಡುಪಿ, ಮಂಗಳೂರು, ಬಂಟ್ವಾಳ್, ಸುಳ್ಯ, ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಸಾರ್ವತ್ರಿಕ ಮುಷ್ಕರ, ಬಂದ್ ಯಶಸ್ವಿ ಆಗಿವೆ.

ಮಂಗಳೂರಿನಲ್ಲಿ ಮುಷ್ಕರದ ಹಿಂದಿನ ದಿನ 18ರ ಸಂಜೆ ಪೋಲೀಸ್ ಅಧಿಕಾರಿಗಳು ಸುಮಾರು 30 ಸಿಟಿ ಬಸ್‌ಗಳನ್ನು ಪ್ರಯಾಣಿಕರ ಸಮೇತ ಪೋಲೀಸ್ ಸ್ಟೇಷನ್ನಿಗೆ ಕೊಂಡು ಹೋಗಿ ಅಲ್ಲಿ ಕಂಡಕ್ಟರ, ಡ್ರೈವರ್‌ಗಳನ್ನು ಬೆದರಿಸಿ, ಅವರ ಲೈಸನ್ಸ್‌ಗಳನ್ನು ಎಳೆದುಕೊಂಡು ಮರುದಿನ ಬಸ್ ಓಡಿಸುವಂತೆ ಬಲಾತ್ಕರಿಸಿದ ಘಟನೆ ವರದಿಯಾಗಿದೆ. ಪೋಲೀಸ್ ರಕ್ಷಣೆಯಲ್ಲಿ ಸಿಟಿ ಬಸ್‌ಗಳನ್ನು ಓಡಿಸಿದ್ದಲ್ಲದೇ ಬೇರೆ ಬಸ್‌ಗಳು ಬೀದಿಗಿಳಿಯಲಿಲ್ಲ.

ಬಂಟ್ವಾಳದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿಗೆ ಪೋಲೀಸರು ನುಗ್ಗಿ ಪಕ್ಷದ ಮುಖಂಡರನ್ನು, ಕಾರ್ಯಕರ್ತರನ್ನು ಥಳಿಸಿ ಅವರನ್ನು ಬಂಧಿಸಿದ್ದಾರೆ. ಕಚೇರಿಯ ಉಪಕರಣಗಳನ್ನು ನಾಶಮಾಡಿರುವುದಾಗಿ ವರದಿಯಾಗಿದೆ.

ಮುಷ್ಕರ ಯಶಸ್ವಿಯಾಗುವಲ್ಲಿ ಸಹಕರಿಸಿದವರಿಗೆಲ್ಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ಮತ್ತು ಸಿ. ಐ. ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾಂ. ಮೂಸಬ್ಬ ಅಭಿನಂದಿಸಿದ್ದಾರೆ.

ಸುಳ್ಯ ತಾಲ್ಲೂಕಿನಲ್ಲಿ ಮುಷ್ಕರ ಯಶಸ್ವಿಯಾಗಿರುವ ವರದಿ ಬಂದಿದೆ. ತಾಲ್ಲೂಕಿನ ಗುತ್ತಿಗಾರು, ನಡುಗಲ್ಲು, ದೊಡ್ಡತೋಟ, ಬೆಳ್ಳಾರೆ, ಕನಕಮಜಲು, ಪಂಜ, ಮರ್ಕಂಜ ಮೊದಲಾದೆಡೆ ಬಂದ್ ನಡೆಯಿತು. ಸುಳ್ಯದ ರಬ್ಬರ್ ಪ್ಲಾಂಟೇಶನ್‌ಗಳಲ್ಲಿ ಶೇ. 90 ರಷ್ಟು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ತಾಲ್ಲೂಕಿನ ಬೀಡಿ ಕಾರ್ಮಿಕರೂ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ತಾಲ್ಲೂಕಿನಾದ್ಯಂತ ಸಿ. ಪಿ. ಐ. (ಎಂ), ಸಿ.ಐ.ಟಿ.ಯು., ಡಿ.ವೈ.ಎಫ್.ಐ., ಎಸ್.ಎಫ್.ಐ.ಗಳಿಗೆ ಸೇರಿದ ಸುಮಾರು 150 ಜನರನ್ನು ಬಂಧಿಸಲಾಗಿತ್ತು. ಬಂಧಿತರಲ್ಲಿ ಕಾಂ. ಸೂರ್ಯನಾರಾಯಣ ಭಟ್, ಕೆ. ಮೋನಪ್ಪಗೌಡ, ಪಿ. ಕೆ. ಮೂಸಾ, ಎನ್. ಕಾತಮುತ್ತು, ಭಾಸ್ಕರರಾವ್, ಲಕ್ಷ್ಮಣಗೌಡ, ಬಾಲಕೃಷ್ಣಗೌಡ ಮತ್ತು ಮುಹಮ್ಮದ್ ಕುಂಞ ಪ್ರಮುಖರು.

ಸುಳ್ಯ, ದೊಡ್ಡ ತೋಟ, ಕನಕಮಜಲು, ಅರಂತೋಡುಗಳಲ್ಲಿ ಲಾಠೀ ಚಾರ್ಜ್ ನಡೆಸಲಾಗಿದೆ. ಕನಕಮಜಲಿನಲ್ಲಿ ರೈತಸಂಘದ ಕಾರ್ಯದರ್ಶಿ ಕಾಂ. ಅಬ್ದುಲ್‌ಖಾದರ್ ಲಾಠೀಪೆಟ್ಟಿನಿಂದಾಗಿ ಆಸ್ಪತ್ರೆ ಸೇರಿದ್ದಾರೆ. 14 ವರ್ಷದ ಎಸ್. ಎಫ್. ಐ. ಕಾರ್ಯಕರ್ತ ಮೈದು ಲಾಠೀಚಾರ್ಜ್‌ನಲ್ಲಿ ವಿಪರೀತಗಾಯಗೊಂಡಿದ್ದಾರೆ.

ತುಮಕೂರು

ತುಮಕೂರು ನಗರ ಮತ್ತು ಜಿಲ್ಲೆಯಲ್ಲಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿರುವ ವರದಿ ಬಂದಿವೆ. ತುಮಕೂರು ನಗರದಲ್ಲಿ ಪೋಲೀಸ್ ವ್ಯಾನ್‌ಗಳಿಗೆ ಧ್ವನಿವರ್ಧಕ ಕಟ್ಟಿ ಮುಷ್ಕರ ನಡೆಯದಂತೆ ಪೋಲೀಸರು ಶತಪ್ರಯತ್ನಪಟ್ಟರೂ ಮುಷ್ಕರ ಮತ್ತು ಬಂದ್ ಯಶಸ್ವಿಯಾಗಿ ನಡೆದಿದೆ. (ಮುಷ್ಕರದ ಅಂಗವಾಗಿ ತುಮಕೂರು ಬಂದ್‌ಗೆ ಕರೆ ನೀಡಲಾಗಿತ್ತು).

19ರಂದು ಬೆಳಿಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧುರೀಣ ಕಾಂ. ಕೆ. ಆರ್. ನಾಯಕ್, ಲೋಕಸಭೆಯ ಟಿ. ಜಿ. ಸಿದ್ಧಲಿಂಗಯ್ಯ ಇವರನ್ನು ಬಂಧಿಸಲಾಗಿತ್ತು. ಹಿಂದಿನ ದಿನ (ಜ. 18) ಜಿಲ್ಲಾಧಿಕಾರಿಗಳು ಜಿಲ್ಲೆಯ 10 ಪ್ರದೇಶಗಳಲ್ಲಿ ಪೋಲೀಸ್ ಕಾಯ್ದೆ 144ನೇ ಸೆಕ್ಷನ್ ಜಾರಿಗೊಳಿಸಿದ್ದರು.

ಬೆಳಿಗ್ಗೆ 11 ಘಂಟೆಯ ಸಮಯದಲ್ಲಿ ಕಾಂ. ಎಚ್. ಪಿ. ಚನ್ನಪ್ಪ, ಹಾಜರಾಂಬಿ ಮತ್ತು ಕಾಂ. ಮಹಮದ್ ದಸ್ತಗೀರ್ ನಾಯಕತ್ವದಲ್ಲಿ ಬೀಡಿ ಮತ್ತಿತರ ಕಾರ್ಮಿಕರನ್ನೊಳಗೊಂಡ ಮೆರವಣಿಗೆ ಹೊರಡಿಸಲೆತ್ನಿಸಿದಾಗ ಮಹಿಳಾ ಕಾರ್ಮಿಕರನ್ನೊಳಗೊಂಡಂತೆ ಇವರನ್ನು ಬಂಧಿಸಲಾಗಿದೆ.

ಮಧ್ಯಾಹ್ನ ನಗರದ ಅಶೋಕಾ ರಸ್ತೆಯಲ್ಲಿ ಎಸ್. ಎಫ್. ಐ.ನ ಕಾಂ. ರವೀಂದ್ರ ನಾಯಕ್, ಸೈಯ್ಯದ್ ಅನ್ವರ್ ಮತ್ತು ಕಾಂ. ಹಯಾನ್‌ರ ನೇತೃತ್ವದಲ್ಲಿ ನಿಷೇದಾಜ್ಞೆ ಉಲ್ಲಂಘಿಸಿ ಮೆರವಣಿಗೆ ತೆಗೆಯಲೆತ್ನಿಸಿದಾಗ 11 ಜನರನ್ನು ಬಂಧಿಸಲಾಗಿದೆ.

ನಗರದ ಎಲ್ಲಾ ಬೀಡಿ ಫ್ಯಾಕ್ಟರಿಗಳು, ಸಣ್ಣ ಕೈಗಾರಿಕಾ ಘಟಕಗಳು, ನಗರದ ವ್ಯಾಪಾರಗಳು, ಹೋಟೆಲ್, ಸಿನೆಮಾ ಎಲ್ಲಾ ಮಹಿವಾಟುಗಳು ಸ್ತಬ್ಧವಾಗಿದ್ದವು. ಬ್ಯಾಂಕ್, ಎಲ್ಲೈಸಿ ನೌಕರರು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಸರಕಾರಿ ಮತ್ತು ಅಂಚೆತಂತಿ ನೌಕರರು ಕಪ್ಪುಬ್ಯಾಡ್ಜ ಧರಿಸಿ ಅವರವರ ಕಚೇರಿ ಎದುರು ಕರಾಳಶಾಸನಗಳ ವಿರುದ್ಧ ಘೋಷಣೆ ಕೂಗಿದರು.

ಬಂಧಿತರಲ್ಲಿ ಸಿ. ಪಿ. ಐ.ನ ಕಾಂ. ಪಿ. ಸಿ. ಶಿವನಂಜಪ್ಪ, ಕಾಂಗ್ರೆಸ್(ಐ)ನ ಶ್ರೀ ನಜೀರ್‌ಬೇಗ್ ಸೇರಿದ್ದಾರೆ.

ಕಾಂ. ನಜೀರ್, ವಜೀರ್, ಬಾಬು, ಮಲ್ಲಯ್ಯ, ಸೈಯ್ಯದ್ ರಸೂದ್ ಸಾಬ್ ಮತ್ತು ಕಾಂ. ವಹೀದ್ ಮತ್ತಿತರರು ಬಂಧನಕ್ಕೊಳಗಾಗಿದ್ದರು.

ತಿಪಟೂರಿನಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ. ಮುಷ್ಕರಕ್ಕೆ ಬೆಂಬಲವಾಗಿ ವಿರೋಧ ಪಕ್ಷಗಳ ಸಮನ್ವಯ ಸಮಿತಿ ತಿಪಟೂರ್ ಬಂದ್‌ಗೆ ಕರೆ ನೀಡಲಾಗಿದ್ದು ಬಂದ್ ಯಶಸ್ವಿಯಾಗಿ ನಡೆದಿದೆ.

ತಿಪಟೂರಿನಲ್ಲಿ ಸೆ. 144 ಜಾರಿಯಲ್ಲಿತ್ತು. ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಪುರಸಭಾ, ಬ್ಯಾಂಕ್, ಎಲ್ಲೈಸಿ, ಪಿ. ಡಬ್ಲ್ಯು. ಡಿ. ನೌಕರರು ಮೆರವಣಿಗೆ ಹೊರಡಿಸಲೆತ್ನಿಸಿದಾಗ ಕಾಂ. ಬಿ. ಡಿ. ರಾಮಯ್ಯ, ಕೋದಂಡರಾಮು ಇವರುಗಳು ಸೇರಿದಂತೆ 97 ಜನರು ಬಂಧಿತರಾದರು. ರಾತ್ರಿ 10 ಘಂಟೆಗೆ ಬಿಡುಗಡೆ ಮಾಡಲಾಯಿತು.

ಬಂಧಿತರಲ್ಲಿ ಜನತಾಪಕ್ಷದ ರೇವಣಸಿದ್ಧಪ್ಪ, ಕಾಂಗ್ರೆಸ್ (ಎಸ್)ನ ವಿ.ಜಿ. ಛತ್ರಪತಿ, ಬಿಜೆಪಿಯ ವಿಶ್ವೇಶ್ವರಯ್ಯ ಮತ್ತು ಕಾಂ. ದಯಾಮಯಾ ಸೇರಿದ್ದಾರೆ.

ಕುಣಿಗಲ್‌ನಲ್ಲೂ ಮುಷ್ಕರ ಯಶಸ್ವಿಯಾಗಿರುವ ವರದಿ ಬಂದಿದೆ. ಮುಷ್ಕರವನ್ನು ಬೆಂಬಲಿಸಿ ಬಂದ್‌ಗೂ ಕರೆ ನೀಡಲಾಗಿತ್ತು. ಕುಣಿಗಲ್‌ನಲ್ಲಿ ಮೊದಲೇ ಸೆ. 144 ಜಾರಿಯಾಗಿತ್ತು. ಬೆಳಿಗ್ಗೆ 7 ಘಂಟೆ ಸಮಯದಲ್ಲಿ ಕಾಂ. ಆಂಜನಪ್ಪನವರನ್ನು ಬಂಧಿಸಿದರು. ಕಾಂಗ್ರೆಸ್ಸಿನವರು ಬಂದ್‌ನ್ನು ವಿಫಲಗೊಳಿಸಲು ಪ್ರಯತ್ನಪಟ್ಟರೂ ಬಂದ್ ಯಶಸ್ವಿಯಾಗಿ ನಡೆಯಿತು. ಮಧ್ಯಾಹ್ನದಲ್ಲಿ ಕಾಂ. ಬಡೇಸಾಬ್‌ರ ನೇತೃತ್ವದಲ್ಲಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೊರಡಿಸಲೆತ್ನಿಸಿದಾಗ ಅವರನ್ನು ಮತ್ತಿತರ ಬೀಡಿಕಾರ್ಮಿಕರನ್ನು ಬಂಧಿಸಲಾಯಿತು. ಕಾಂ. ಯೂನುಸ್‌ಖಾನ್‌ರ ನೇತೃತ್ವದಲ್ಲಿ ಮೆರವಣಿಗೆ ಬರುತ್ತಿದ್ದಾಗ ಕಾಂ. ಯೂನುಸ್‌ಖಾನರನ್ನೂ ಸೇರಿ ಇಪ್ಪತ್ತು ಜನರನ್ನು ಬಂಧಿಸಿದ್ದಾರೆ. ನಂತರ ಪುರಸಭಾ ಸದಸ್ಯ ಕೆ. ಜಿ. ನಾಗರಾಜ್, ಸಿದ್ಧರಾಜು ಇವರ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಬಂದ ಕಾರ್ಯಕರ್ತರನ್ನು ಬಂಧಿಸಿದರು.

ಮಧ್ಯಾಹ್ನ 3 ಘಂಟೆ ಸಮಯದಲ್ಲಿ ಕಾಂ. ಸಲೀಮಾ ಬೇಗಂ, ಸಾಬೀರಾಬಿ, ಇಂತಿಯಾಜ್ ಬೇಗಂರ ನೇತೃ

(6ನೇ ಪುಟ ನೋಡಿ)

ಸಿ. ಪಿ. ಐ. (ಎಂ) ರಾಜ್ಯ ಸಮ್ಮೇಳನಗಳು

ಜನವರಿ 26ರಿಂದ 31ರವರೆಗೆ ವಿಜಯವಾಡಾದಲ್ಲಿ ನಡೆದ ಪಕ್ಷದ ಹನ್ನೊಂದನೇ ಅಖಿಲಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಎಲ್ಲಾ ರಾಜ್ಯಸಮಿತಿಗಳು ರಾಜ್ಯಸಮ್ಮೇಳನಗಳನ್ನು ನಡೆಸಿವೆ. ಕರ್ನಾಟಕ ರಾಜ್ಯ ಸಮ್ಮೇಳನದ ವರದಿ ಈಗಾಗಲೇ ವಿವರವಾಗಿ ಬಂದಿದೆ. ಉಳಿದ ಸಮ್ಮೇಳನಗಳ ಸಂಕ್ಷಿಪ್ತ ವರದಿ ಇಲ್ಲಿದೆ.

ಪಂಜಾಬ್

ಪಕ್ಷದ 10ನೇ ಅಖಿಲಭಾರತ ಸಮ್ಮೇಳನವನ್ನು 1978ರಲ್ಲಿ ಜಲಂಧರ್‌ನಲ್ಲಿ ಯಶಸ್ವಿಯಾಗಿ ಏರ್ಪಡಿಸಿದ್ದ ಪಂಜಾಬ್‌ನ 11ನೇ ರಾಜ್ಯ ಸಮ್ಮೇಳನ ನವೆಂಬರ್ 25, 26 ಮತ್ತು 27ರಂದು ನಾಕೋದರ್‌ನಲ್ಲಿ ಜರುಗಿತು. 127 ಪ್ರತಿನಿಧಿಗಳು ಭಾಗವಹಿಸಿದ್ದರು. ಬಿ. ಟಿ. ರಣದಿವೆ ಉದ್ಘಾಟನೆ ನಡೆಸಿ ಆರಂಭದಲ್ಲಿ ಪ್ರತಿನಿಧಿಗಳನ್ನುದ್ದೇಶಿಸಿ ರಾಷ್ಟ್ರೀಯ, ಅಂತರ್ರಾಷ್ಟ್ರೀಯ ವಿದ್ಯಮಾನಗಳ ಕುರಿತು ಮಾತನಾಡಿದರು. 12 ಸದಸ್ಯರಿರುವ ಹೊಸ ರಾಜ್ಯಸಮಿತಿಯನ್ನು ಆರಿಸಲಾಯಿತು. ಸತ್‌ವಂತ್‌ಸಿಂಗ್ ಕಾರ್ಯದರ್ಶಿಯಾಗಿ ಚುನಾಯಿತರಾದರು.

ರಾಜಸ್ತಾನ್

ಪಕ್ಷದ 11ನೇ ರಾಜ್ಯಸಮ್ಮೇಳನ ಡಿಸೆಂಬರ್ 2 ಹಾಗೂ 3ರಂದು ಹನುಮಂತಘಡದಲ್ಲಿ ನಡೆಯಿತು. 113 ಪ್ರತಿನಿಧಿಗಳು ಭಾಗವಹಿಸಿದ್ದರು. ಸಾಲ್ಕಿಯಾ ಪ್ಲೀನಂ ನಿರ್ಧಾರಗಳನ್ನು ಸರಿಯಾಗಿ ಅನುಷ್ಠಾನಗೊಳಿಸದ ಬಗ್ಗೆ ಟೀಕೆ, ವಿಮರ್ಶೆ ನಡೆದವು. ಈ ತಪ್ಪುದಾರಿಯಿಂದಾಗಿ ರಾಜ್ಯಸಮಿತಿಯು ಹಿಂದಿನ ಕಾರ್ಯದರ್ಶಿಯವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕಾಗಿ ಬಂದಿತು. 24 ಸದಸ್ಯರಿರುವ ಹೊಸ ರಾಜ್ಯಸಮಿತಿಯಲ್ಲಿ ಹರಿರಾಮ್ ಚೌಹಾಣ್ ಕಾರ್ಯದರ್ಶಿ.

ಕೇರಳ

305 ಪ್ರತಿನಿಧಿಗಳು ಭಾಗವಹಿಸಿದ್ದ ಕೇರಳ ರಾಜ್ಯ 11ನೇ ಸಮ್ಮೇಳನ ತ್ರಿಚೂರ್‌ನಲ್ಲಿ ಡಿಸೆಂಬರ್ 2ರಿಂದ 6ರ ವರೆಗೆ ವಿಶೇಷವಾಗಿ ನಿರ್ಮಿತವಾಗಿದ್ದ 'ಬಾಲಸುಬ್ರಮಣ್ಯಂ ನಗರ'ದಲ್ಲಿ ನೆರವೇರಿತು. ಪಕ್ಷ ಹಿಂದೆಂದೂ ಕಂಡಿರದ ರೀತಿಯಲ್ಲಿ ಬೆಳೆದಿದೆಯೆಂದು ರಾಜ್ಯಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ. ಪಕ್ಷವನ್ನು ಶೀಘ್ರದಲ್ಲಿ ಸುದೃಢವಾಗಿ ಜನತೆಯ ಆಶೋತ್ತರಗಳಿಗನುಗುಣವಾಗಿ ಹೇಗೆ ಬೆಳೆಸಬೇಕೆಂಬುದರ ಬಗ್ಗೆ ತೀವ್ರ ಚರ್ಚೆ ನಡೆಯಿತು. 54 ಸದಸ್ಯರಿರುವ ಹೊಸ ರಾಜ್ಯಸಮಿತಿ ಚುನಾಯಿಸಲಾಯಿತು. ವಿ. ಎಸ್. ಅಚ್ಯುತನಂದನ್ ರಾಜ್ಯಸಮಿತಿಯ ಕಾರ್ಯದರ್ಶಿಯಾಗಿ ಚುನಾಯಿತರಾದರು. ಸಮ್ಮೇಳನದ ನಂತರ ನಡೆದ ಬೃಹತ್ ಸಭೆ ಉದ್ದೇಶಿಸಿ ಮಾತನಾಡಿದ ಪ. ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸುರವರು ಉದ್ಗರಿಸಿದಂತೆ "ಅವಿಸ್ಮರಣೀಯ". ಸುಮಾರು ಎರಡು ತಿಂಗಳ ಹಿಂದೆ ನಯನಾರ್ ಸರಕಾರ ರಾಜೀನಾಮೆ ಕೊಟ್ಟರೂ ಇನ್ನೂ ಪಕ್ಷ ರಾಜ್ಯದ ಅತ್ಯಂತ ಪ್ರಭಾವಶಾಲಿ ಶಕ್ತಿಯೆಂಬುದನ್ನು ಇದು ಮತ್ತೊಮ್ಮೆ ಎಲ್ಲರ ಮನಗಾಣಿಸಿತು.

ಹರ್ಯಾಣಾ

ರಾಜ್ಯದ 4ನೇ ಸಮ್ಮೇಳನ ಡಿಸೆಂಬರ್ 4 ರಿಂದ 6ರವರೆಗೆ ಕುರುಕ್ಷೇತ್ರದಲ್ಲಿ ಜರುಗಿತು. 62 ಪ್ರತಿನಿಧಿಗಳು ಭಾಗವಹಿಸಿದ್ದರು. ಸಾಂಸ್ಕೃತಿಕ ರಂಗದಲ್ಲಿ ಪಕ್ಷದ ಚಟುವಟಿಕೆ ಕಮ್ಮಿಯೆಂದು ಸ್ವವಿಮರ್ಶೆ ನಡೆಯಿತು. ಲೋಕದಳ ಕಮ್ಯೂನಿಸ್ಟ್ ವಿರೋಧಿ ಪ್ರವೃತ್ತಿ ತೋರಿಸಿದರೂ ಈಗೀಗ ಸಂಯುಕ್ತ ಕಾರ್ಯಾಚರಣೆಯ ಫಲವಾಗಿ ಆ ದಳದ ಕಾರ್ಯಕರ್ತರ ಕಮ್ಯೂನಿಸ್ಟ್ ವಿರೋಧದ ತೀಕ್ಷ್ಣತೆ ಕಮ್ಮಿಯಾಗುತ್ತಿದೆ ಎಂದು ಪ್ರತಿನಿಧಿಗಳು ಹೇಳಿದರು. 10 ಜನ ಸದಸ್ಯರಿರುವ ಹೊಸ ರಾಜ್ಯಸಮಿತಿಗೆ ರಘುಬೀರ್ ಸಿಂಗ್ ಹೂಡಾ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಮಧ್ಯಪ್ರದೇಶ

93 ಪ್ರತಿನಿಧಿಗಳು ಭಾಗವಹಿಸಿದ್ದ 4ನೇ ರಾಜ್ಯಸಮ್ಮೇಳನ ಡಿಸೆಂಬರ್ 7ರಿಂದ 9ರ ವರೆಗೆ ಗ್ವಾಲೀರನಲ್ಲಿ ನಡೆಯಿತು. 15 ಸದಸ್ಯರಿರುವ ಹೊಸ ರಾಜ್ಯಸಮಿತಿಗೆ ಮೋತೀಲಾಲ್ ಶರ್ಮಾ ಕಾರ್ಯದರ್ಶಿಗಳು. ಪಕ್ಷ ಬೆಳೆದಿದೆಯಾದರೂ ರಾಜ್ಯದ ಗಾತ್ರಕ್ಕೆ ಪಕ್ಷದ ಬಲ ಇನ್ನೂ ಕಮ್ಮಿಯೆಂದು ಅಭಿಪ್ರಾಯಪಡಲಾಯಿತು.

ಬಿಹಾರ್

11ನೇ ರಾಜ್ಯಸಮ್ಮೇಳನ ಡಿಸೆಂಬರ್ 11ರಿಂದ 14ರ ವರೆಗೆ ಪಾಟ್ನಾದಲ್ಲಿ ಜರುಗಿತು. 304 ಪ್ರತಿನಿಧಿಗಳು ಭಾಗವಹಿಸಿದ್ದರು. ರಾಜ್ಯಸಮಿತಿಯ ವರದಿಯಲ್ಲಿ ರಾಜ್ಯದಲ್ಲಿ ಕಾನೂನು ಪರಿಸ್ಥಿತಿ ಬಹಳವಾಗಿ ಬಿಗಡಾಯಿಸಿದೆ ಎಂದು ಗಮನಿಸಲಾಯಿತು. ರಾಜ್ಯದ ಹಲವೆಡೆ ಕೋಮುವಾರು ದಂಗೆಗಳು ನಡೆದಾಗ ಪಕ್ಷದ ಸಂಗಾತಿಗಳು ಸಾಮಾನ್ಯ ಜನರಿಗೆ ನೆರವಾಗುವಲ್ಲಿ ಪ್ರಶಂಸಾರ್ಹವಾಗಿ ದುಡಿದಿದ್ದಾರೆಂದು ತಿಳಿಸಲಾಯಿತು. 37 ಸದಸ್ಯರ ಹೊಸ ರಾಜ್ಯಸಮಿತಿಗೆ ಗಣೇಶಶಂಕರ ವಿದ್ಯಾರ್ಥಿ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಆಂಧ್ರಪ್ರದೇಶ

ಹಿಂದೆ ಬಲ ಪರಿಷ್ಕರಣವಾದೀ ಹಾಗೂ ಎಡ ದುಸ್ಸಾಹಸವಾದಿಗಳನ್ನು ಮತ್ತು ಎರಡು ಪ್ರತ್ಯೇಕತಾವಾದಿ ಚಳುವಳಿಗಳನ್ನು ಎದುರಿಸಬೇಕಾಗಿ ಬಂದ ಪಕ್ಷದ ರಾಜ್ಯ ಘಟಕದ 14ನೇ ಸಮ್ಮೇಳನ ಪ್ರಗತಿಯ ಸಮ್ಮೇಳನ. ಡಿಸೆಂಬರ್ 17ರಿಂದ 20ರ ವರೆಗೆ ವಿಜಯವಾಡಾದಲ್ಲಿ ಅದು ನಡೆಯಿತು. 294 ಪ್ರತಿನಿಧಿಗಳು ಭಾಗವಹಿಸಿದ್ದರು. 57 ಸದಸ್ಯರ ಹೊಸ ರಾಜ್ಯಸಮಿತಿಗೆ ಪಿ. ಸುಂದರಯ್ಯ ಕಾರ್ಯದರ್ಶಿಯಾಗಿ ಚುನಾಯಿತರಾದರು.

ದಿಲ್ಲಿ

ನವದೆಹಲಿಯಲ್ಲಿ ದಿಲ್ಲಿಯ 3ನೇ ರಾಜ್ಯಸಮ್ಮೇಳನ ಡಿಸೆಂಬರ್ 19, 20ರಂದು ಜರುಗಿತು. 87 ಪ್ರತಿನಿಧಿಗಳು ಭಾಗವಹಿಸಿದ್ದರು. ರಾಜ್ಯಸಮಿತಿಯ ವರದಿಯಲ್ಲಿ ಮಧ್ಯಮವರ್ಗೀಯರ ಮೇಲೆ ಆರ್. ಎಸ್. ಎಸ್.ನ ಸಂಕುಚಿತವಾದೀ ಹಿಡಿತವನ್ನು ಸಡಿಲಗೊಳಿಸಲು ಪ್ರಯತ್ನಿಸಬೇಕೆಂದೂ, ಮುಸ್ಲಿಂ ಅಲ್ಪಸಂಖ್ಯಾತರ ರಕ್ಷಣೆಗೆ ದುಡಿಯಬೇಕೆಂದೂ ತಿಳಿಸಲಾಯಿತು. ಹಿಂದೀ ಹಾಗೂ ಉರ್ದು 'ಲೋಕ್ ಲಹರ್'ಸೇರಿದಂತೆ ಪಕ್ಷದ ಪ್ರಕಟಣೆಗಳ ಪ್ರಸಾರ ಬಹಳ ಕಮ್ಮಿಯೆಂದು ಅಭಿಪ್ರಾಯಪಡಲಾಯಿತು. 17 ಸದಸ್ಯರ ಹೊಸ ರಾಜ್ಯಸಮಿತಿಗೆ ಜಯಪಾಲ್ ಸಿಂಗ್ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಪಶ್ಚಿಮ ಬಂಗಾಳ

486 ಪ್ರತಿನಿಧಿಗಳು ಭಾಗವಹಿಸಿದ್ದ ಪ. ಬಂಗಾಳ ರಾಜ್ಯಸಮಿತಿಯ 14ನೇ ರಾಜ್ಯಸಮ್ಮೇಳನ ಕಲಕತ್ತೆಯಲ್ಲಿ ಡಿಸೆಂಬರ್ 27ರಿಂದ ಜನವರಿ 3ರ ವರೆಗೆ ಯಶಸ್ವಿಯಾಗಿ ಜರುಗಿತು. ನಂತರ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಇ. ಎಂ. ಎಸ್., ಜ್ಯೋತಿಬಸು ಹಾಗೂ ರಾಜ್ಯಸಮಿತಿ ಕಾರ್ಯದರ್ಶಿ ಪ್ರಮೋದ್ ದಾಸಗುಪ್ತಾ ಮಾತನಾಡಿದರು. ಪಶ್ಚಿಮ ಬಂಗಾಳದ ಮೂಲೆಮೂಲೆಗೂ ಪಕ್ಷ ವ್ಯಾಪಿಸಿದೆಯೆಂದು ತಿಳಿಸಿದರು. ಕಳೆದ 4 ವರ್ಷಗಳಲ್ಲಿ ಪಕ್ಷ ಎಲ್ಲ ಸಾಮೂಹಿಕ ರಂಗಗಳಲ್ಲಿ ಭಾರೀ ಬೆಳವಣಿಗೆ ಸಾಧಿಸಿದೆ.

ಕೇಂದ್ರಸಮಿತಿಯ ವಿವಿಧ ಸದಸ್ಯರು ಎಲ್ಲಾ ರಾಜ್ಯಸಮ್ಮೇಳನಗಳನ್ನುದ್ದೇಶಿಸಿ ಮಾತನಾಡಿ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಹೆಚ್ಚುತ್ತಿರುವ ಸಾಮ್ರಾಜ್ಯಶಾಹೀ ನ್ಯೂಕ್ಲಿಯರ್ ಯುದ್ಧ ಭೀತಿಯ ಬಗ್ಗೆ, ರಾಷ್ಟ್ರೀಯ ರಂಗದಲ್ಲಿ ಐ. ಎಂ. ಎಫ್. ಸಾಲ; ಕಾಂಗ್ರೆಸ್ (ಐ)ನ ಸರ್ವಾಧಿಕಾರೀ ಆಡಳಿತದ ಬಗ್ಗೆ ಪಕ್ಷದ ನಿಲುವನ್ನು ವಿವರಿಸಿದರು. ರಾಜ್ಯಸಮಿತಿಗಳ ವರದಿಗಳಲ್ಲಿ ವಿವಿಧ ಘಟಕಗಳು ಸಾಧಿಸಿದ ಪ್ರಗತಿಯ ಬಗ್ಗೆ ತಿಳಿಸಲಾಯಿತು. ಸುಮಾರಾಗಿ ಎಲ್ಲಾ ರಾಜ್ಯಗಳಲ್ಲಿ ಪಕ್ಷ ಭಾರೀ ಬೆಳವಣಿಗೆ ಸಾಧಿಸಿದೆ. ಆದರೂ ಕೆಲವು ರಾಜ್ಯಗಳಲ್ಲಿ ಹಾಗೂ ಕೆಲವು ಸಾಮೂಹಿಕ ರಂಗಗಳಲ್ಲಿ ಇನ್ನಷ್ಟು ಕೆಲಸವಾಗಬೇಕಾಗಿದೆ. ಸಾಲ್ಕಿಯಾ ಪ್ಲೀನಂನ ಸಂಘಟನಾತ್ಮಕ ನಿರ್ಧಾರಗಳು ಪಕ್ಷದ ಸಾಮೂಹಿಕ ನಾಯಕತ್ವದಲ್ಲಿ ಬಹಳ ಸುಧಾರಣೆ ತಂದಿರುವುದಾಗಿ ಈ ವರದಿಗಳಿಂದ ತಿಳಿಯುತ್ತದೆ. ಎಲ್ಲಾ ಸಮ್ಮೇಳನಗಳಲ್ಲಿ ತೀವ್ರವಾದ ವಿಮರ್ಶೆ, ಸ್ವವಿಮರ್ಶೆ ನಡೆದವು.

ರಾಜ್ಯ ಸಮ್ಮೇಳನಗಳು ಪಕ್ಷದಲ್ಲಿ ಪ್ರಜಾಪ್ರಭುತ್ವವಾದೀ ಆಚರಣೆ ಎಷ್ಟು ಆಳವಾಗಿ ಬೇರೂರಿದೆ ಎಂಬುದನ್ನು ತೋರಿಸಿಕೊಟ್ಟಿವೆ. ಕೇರಳ ರಾಜ್ಯ ಸಮ್ಮೇಳನದಲ್ಲಿ ಜ್ಯೋತಿಬಸು ಹೇಳಿರುವಂತೆ – "ತಮ್ಮ ಹಣೆಯ ಮೇಲೆ 'ಪ್ರಜಾತಾಂತ್ರಿಕ' ಎಂದು ಬೋರ್ಡ್ ತಗಲಿಸಿಕೊಂಡ ಎಷ್ಟು ಪಕ್ಷಗಳು ತಮ್ಮ ಸಮಿತಿಗಳಿಗೆ ಸಮಯ-ಸಮಯಕ್ಕೆ ಚುನಾವಣೆ ನಡೆಸುತ್ತವೆ? ಇಂದಿರಾ ಕಾಂಗ್ರೆಸ್ಸೂ ಸೇರಿ ಹಲವು ಪಕ್ಷಗಳಲ್ಲಿ ಫರ್ಮಾನು ಗಟ್ಟಲೆ ಪಕ್ಷದ 'ಮಹಾನಾಯಕ'ರೇ ಎಲ್ಲಾ ಸಮಿತಿಗಳಿಗೆ ನೇಮಕಾತಿ ಮಾಡಿಕೊಂಡು ಬಂದಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಸಿ.ಪಿ.ಐ.(ಎಂ) ಪ್ರತಿ 3 ಅಥವಾ 4 ವರ್ಷಗಳಿಗೊಮ್ಮೆ ತನ್ನ ಸಮ್ಮೇಳನ ನಡೆಸಿಕೊಂಡು ಬಂದಿದೆ. ಚುನಾವಣೆಗಳನ್ನು ಸಿದ್ಧಾಂತ, ರಾಜಕೀಯ ಹಾಗೂ ಕಾರ್ಯನೀತಿಗಳ ಬಗ್ಗೆ ಚರ್ಚೆಗಳನ್ನು ನಡೆಸಿದೆ. ಆದ್ದರಿಂದಲೇ ಹಲವು ಪಕ್ಷಗಳು ಒಡೆದು ಹೋಗುತ್ತಿರುವಾಗ, ಅವುಗಳ ಕಾರ್ಯಕರ್ತರು ನಿರಾಶರಾಗಿ ಕೈ ಚೆಲ್ಲುತ್ತಿರುವಾಗ ಸಿ.ಪಿ.ಐ.(ಎಂ)ನ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ, ಉತ್ಸಾಹ ಕಾಣುತ್ತಿದೆ. ಹೆಚ್ಚೆಚ್ಚು ಜನ ಪಕ್ಷದ ಕಡೆಗೆ ಸಾಮೂಹಿಕ ಚಳುವಳಿಯೊಂದಿಗೆ ಆಕರ್ಷಿತರಾಗುತ್ತಿದ್ದಾರೆ"

ಒರಿಸ್ಸಾ

ಪಕ್ಷದ 10ನೇ ರಾಜ್ಯಸಮ್ಮೇಳನವು 1981 ಡಿಸೆಂಬರ್ 21 ರಿಂದ 24ರ ವರೆಗೆ ಕಟಕ್‌ನಲ್ಲಿ ನಡೆಯಿತು. 132 ಪ್ರತಿನಿಧಿಗಳು ಮತ್ತು 15 ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಪಿ.ಬಿ. ಸದಸ್ಯ ಕಾಂ. ಬಸವಪುನ್ನಯ್ಯ ಧ್ವಜಾರೋಹಣ ಮಾಡಿದರು. ಸಮ್ಮೇಳನವನ್ನು ಕಾಂ. ಇ.ಎಂ.ಎಸ್. ಉದ್ಘಾಟಿಸಿದರು. ಕಾರ್ಯದರ್ಶಿ ಕಾಂ. ಶಿವಾಜಿ ಪಟ್ನಾಯಕ್ ಮಂಡಿಸಿದ್ದ ವರದಿಯ ಮೇಲೆ 52 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಮ್ಮೇಳನದಲ್ಲಿ 25 ಸಂಗಾತಿಗಳನ್ನೊಳಗೊಂಡ ರಾಜ್ಯಸಮಿತಿಯನ್ನು ಚುನಾಯಿಸಲಾಯಿತು. ಕಾರ್ಯದರ್ಶಿ ಕಾಂ. ಶಿವಾಜಿ ಪಟ್ನಾಯಕ್ ಪುನರಾಯ್ಕೆಯಾಗಿದ್ದಾರೆ. ಸಮ್ಮೇಳನದ ಅಂಗವಾಗಿ ಕಟಕ್‌ನಲ್ಲಿ ಭಾರೀ ಬಹಿರಂಗ ಸಭೆ, ರ್‍ಯಾಲಿ ಏರ್ಪಡಿಸಲಾಗಿತ್ತು.

ಉತ್ತರ ಪ್ರದೇಶ

ಪಕ್ಷದ 11ನೇ ರಾಜ್ಯ ಸಮ್ಮೇಳನವು 1981 ಡಿಸೆಂಬರ್ 21ರಿಂದ 23ರವರೆಗೆ ಬರೇಲಿಯಲ್ಲಿ ನಡೆಯಿತು. ಸಮ್ಮೇಳನದಲ್ಲಿ 162 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಹತ್ತನೇ ರಾಜ್ಯ ಸಮ್ಮೇಳನದ ಸಮಯದಲ್ಲಿ ಉ.ಪ್ರ.ದಲ್ಲಿ ಎರಡು ಸಮಿತಿ (ಯು.ಪಿ. ಪಶ್ಚಿಮ ಜಿಲ್ಲೆಗಳಿಗೊಂದು ಮತ್ತು ಉಳಿದ ಪ್ರದೇಶಗಳಿಗೆ ಒಂದು) ಗಳಿದ್ದವು. 1979ರಲ್ಲಿ ಈ ಎರಡು ಸಮಿತಿಗಳೂ ವಿಲೀನಗೊಂಡವು. ಮತ್ತು ಈ 11ನೇ ರಾಜ್ಯ ಸಮ್ಮೇಳನ ಸಂಯುಕ್ತ ಉ.ಪ್ರ. ರಾಜ್ಯಘಟಕದ ಸಮ್ಮೇಳನವಾಗಿದೆ.

ಸಮ್ಮೇಳನವನ್ನು ಕಾಂ. ಬಿ. ಟಿ. ರಣದಿವೆ ಉದ್ಘಾಟಿಸಿದರು. ಕಾರ್ಯದರ್ಶಿ ಕಾಂ. ಶಂಕರ್ ದಯಾಳ್ ತಿವಾರಿಯವರು ಮಂಡಿಸಿದ ವರದಿಯ ಮೇಲೆ 66 ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸಮ್ಮೇಳನದಲ್ಲಿ 24 ಜನರನ್ನೊಳಗೊಂಡ ರಾಜ್ಯಸಮಿತಿಯನ್ನು ಚುನಾಯಿಸಲಾಯಿತು. ಕಾಂ. ಶಂಕರ್ ದಯಾಳ್ ತಿವಾರಿಯವರು ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.

ಸಮ್ಮೇಳನದ ಅಂಗವಾಗಿ ಡಿಸೆಂಬರ್ 23ರಂದು ಸ್ಥಳೀಯ ಮೋತಿ ಪಾರ್ಕ್‌ನಲ್ಲಿ ಬಹಿರಂಗಸಭೆ ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾಂ. ಹರಿಕಿಷನ್ ಸಿಂಗ್ ಸುರಜೀತ್, ಕಾಂ. ಜೈಪಾಲ್‌ಸಿಂಗ್ (ಕೇಂದ್ರ ಸಮಿತಿ ಸದಸ್ಯ) ಮೊದಲಾದವರು ಮಾತನಾಡಿದರು.

●

ಚಂದಾ ವಿವರ

ಬಿಡಿ ಪ್ರತಿ : 60ಪೈಸೆ

6 ತಿಂಗಳಿಗೆ : 15ರೂ.

ವಾರ್ಷಿಕ ಚಂದಾ : 30ರೂ.

ಆರ್ಥಿಕ ಸಮೀಕ್ಷೆ :

ಕರ್ನಾಟಕದಲ್ಲಿ ಭೂಸುಧಾರಣೆ

ಆರ್. ಚಂದ್ರ

ಕರ್ನಾಟಕದಲ್ಲಿ ಭೂಸುಧಾರಣಾ ಕಾಯಿದೆ ತುಂಬಾ ಯಶಸ್ವಿಯಾಗಿ ಕಾರ್ಯಗತವಾಗಿದೆ ಎಂದು ಭಾರೀ ಪ್ರಚಾರ ಪ್ರಕ್ಷೋಭೆಗಳು ನಡೆಯುತ್ತಿವೆ. ಹಾಗೆಂದು ನಂಬುವವರು ಅನೇಕರಿದ್ದಾರೆ. ಕಾಯಿದೆಯನ್ನು ಜಾರಿಗೊಳಿಸುವ ಕೆಲಸ ಅಲ್ಪಸ್ವಲ್ಪ ಉಳಿದಿರುವುದನ್ನು ಕರ್ನಾಟಕದ 25 ನೇ ರಾಜ್ಯೋತ್ಸವದ ದಿನವಾದ ನವೆಂಬರ್ 1, 1981 ರಷ್ಟರಲ್ಲಿ ಮುಗಿಸಿಬಿಡಬೇಕೆಂದು ರಾಜ್ಯಸರಕಾರ ನಿಶ್ಚಯಿಸಿದೆ. ಆದರೆ, ನಿಜವಾದ ವಸ್ತುಸ್ಥಿತಿ ಏನು ?

ಕರ್ನಾಟಕ ರಾಜ್ಯದಲ್ಲಿಯೂ, ಭೂಸುಧಾರಣಾ ಕಾಯಿದೆಯು ಭೂಮಾಲಕ–ಬಂಡವಾಳಶಾಹೀ ಹಿತಾಸಕ್ತಿಗಳ ಚೌಕಟ್ಟಿನೊಳಗೇ ಕಾರ್ಯಗತಗೊಳ್ಳುತ್ತಿರುವುದನ್ನು ಮರೆಯಬಾರದು. ಹಳೆ ಮೈಸೂರಿನ ಹಳ್ಳಿಗಳಿಗೆ ಹೋದರೆ, ಭೂಸುಧಾರಣಾ ಕಾಯಿದೆ ಜಾರಿಗೊಳಿಸಿದ ಕುರುಹು ಕೂಡಾ ಕಾಣುವುದಿಲ್ಲ. ಜನರ ನೆನಪಿನಲ್ಲಿರಬಹುದಾದಷ್ಟು ದೀರ್ಘಕಾಲದಿಂದ ಗ್ರಾಮೀಣ ಪ್ರದೇಶಗಳಲ್ಲಿ ಯಾವ ಶಕ್ತಿಶಾಲಿ ಕುಟುಂಬಗಳಿವೆಯೋ ಅವುಗಳೇ ಇಂದಿಗೂ ಪ್ರತಿಷ್ಠೆಯ ಸ್ಥಾನದಲ್ಲಿವೆ. ವ್ಯವಸಾಯ ಅವರ ನಿಯಂತ್ರಣದಲ್ಲಿಯೇ ಇದೆ. ಧಾನ್ಯವು ಅಳಿಯದೇ ಉಳಿದಿದೆ. ಇದು ಹೇಗೆ ಸಾಧ್ಯ ? ಕರ್ನಾಟಕದಲ್ಲಿ ಭೂಸುಧಾರಣಾ ಕಾರ್ಯಕ್ರಮವು ಭೂಮಿತಿ ಕಾಯಿದೆಗೆ ಸಾಕಷ್ಟು ಪ್ರಾಶಸ್ತ್ಯ ಕೊಡದೆ, ಒಕ್ಕಲು ಸಂಬಂಧದ ಸುಧಾರಣೆಗೇ ಹೆಚ್ಚು ಆದ್ಯತೆ ಕೊಟ್ಟಿದೆ.

ಸಡಿಲು ಭೂಮಿತಿ ಕಾಯಿದೆ

ಹತ್ತಾರು ನ್ಯೂನತೆಗಳಿರುವ ಭೂಮಿತಿ ಕಾಯಿದೆ ಅಷ್ಟೊಂದು ಮುಖ್ಯವಾದುದಲ್ಲ. 1965 ರಲ್ಲಿ ಮೊತ್ತಮೊದಲು ಜಾರಿಗೆ ಬಂದ ಈ ಶಾಸನದಲ್ಲಿ 27 ಸ್ಟಾಂಡರ್ಡ್ ಎಕ್ರೆ ಗರಿಷ್ಠ ಭೂಮಿತಿಯಾಗಿತ್ತು. ಒಂದು ಸ್ಟಾಂಡರ್ಡ್ ಎಕ್ರೆ ಎಂದರೆ ಅತ್ಯಂತ ಫಲವತ್ತಾದ ಮತ್ತು ನೀರಾವರಿ ಸೌಕರ್ಯವಿರುವ ಒಂದು ಎಕ್ರೆಯಷ್ಟು ವ್ಯವಸಾಯ ಭೂಮಿ. ಇದು ಎಂಟು ಎಕ್ರೆ ಒಣಭೂಮಿಗೆ ಸಮಾನ. ಅಂದರೆ, ನೀರಾವರಿ ಇಲ್ಲದ ಉತ್ತರ ಕರ್ನಾಟಕ ಪ್ರದೇಶಗಳಲ್ಲಿನ ಗರಿಷ್ಠ ಭೂಮಿತಿ 216 ಎಕ್ರೆಗಳು! ಐದು ಸದಸ್ಯರಿಗಿಂತಲೂ ಹೆಚ್ಚು ಜನರಿರುವ ದೊಡ್ಡ ಕುಟುಂಬದ ಗರಿಷ್ಠ ಭೂಮಿತಿ 432 ಎಕ್ರೆಗಳು! ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಕುಟುಂಬಗಳೇ ಹೆಚ್ಚಾಗಿರುವುದರಿಂದ ಭೂಮಿತಿ ಕಾಯಿದೆಯಿಂದ ಹೆಚ್ಚಿನ ದೊಡ್ಡ ಹಿಡುವಳಿದಾರರಿಗೆ ನಷ್ಟವೇನೂ ಆಗಲಿಲ್ಲ. ಸಕ್ಕರೆ ಕಾರ್ಖಾನೆಯು ತನಗೆ ಬೇಕಾದ ಕಬ್ಬು ಬೆಳೆಯುವ ಭೂಮಿಯ ವಿಸ್ತೀರ್ಣದ ¼ ರಷ್ಟು ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳಬಹುದೆಂದು 1965 ರ ಭೂಮಿತಿ ಕಾಯಿದೆಯಲ್ಲಿದೆ. ಕಾರ್ಖಾನೆಗೆ ಬೇಕಾದ ಭೂಮಿಯನ್ನು ಕಾರ್ಖಾನೆಯ ಮಾಲಕರೇ ನಿರ್ಧರಿಸುತ್ತಿದ್ದರು. ಪರಿಣಾಮವಾಗಿ, ಕೆಲವು ಸಕ್ಕರೆ ಕಾರ್ಖಾನೆಯ ಮಾಲಕರೂ ಆಗಿರುವ ಭೂಮಾಲಕರು ಸಾವಿರಾರು ಎಕ್ರೆಗಳಷ್ಟು ಭೂಹಿಡುವಳಿಯನ್ನು ಹೊಂದಿರುತ್ತಾರೆ.

ಹೊಸ ಘೋಷಣೆಗಳು ಹಳೆಯ ಉದ್ದೇಶಗಳು

1970 ರ ದಶಕದ ಪ್ರಾರಂಭದಲ್ಲಿ 'ಸಮಾಜವಾದ', 'ಗರೀಬಿ ಹಟಾವೋ' ಘೋಷಣೆಗಳು ಪ್ರಬಲವಾಗುತ್ತಾ ಬಂದಂತೆ 1960 ರ ದಶಕದ ಭೂಮಸೂದೆಯಲ್ಲಿ ತೋರಿಕೆಗೆ ಕ್ರಾಂತಿಕಾರಕ ಬದಲಾವಣೆ ಮಾಡಬೇಕಾಯಿತು. ಉದ್ದೇಶ ಯಥಾಸ್ಥಿತಿಯನ್ನು ಮುಂದುವರಿಸುವುದೇ ಆಗಿತ್ತು. 1974 ರ ಭೂಸುಧಾರಣಾ ತಿದ್ದುಪಡಿ ಶಾಸನವು ಈ ಉದ್ದೇಶವನ್ನು ಯಶಸ್ವಿಯಾಗಿ ಸಾಧಿಸಿತು. ಅದು ತೋರಿಕೆಗೆ ಭಾರೀ ಕ್ರಾಂತಿಕಾರಿ. ಭೂಮಿತಿಯನ್ನು 27 ಸ್ಟಾಂಡರ್ಡ್ ಎಕ್ರೆಗಳಿಂದ 10ಕ್ಕೆ ಇಳಿಸಿತು. ಒಣಭೂಮಿಯ ಮಿತಿಯನ್ನು 216 ಎಕರೆಗಳಿಂದ 54 ಕ್ಕೆ ಇಳಿಸಿತು ! ಆದರೆ, ತಿದ್ದುಪಡಿಯಲ್ಲಿ ಜನರ ಗಮನಕ್ಕೆ ಬಾರದ, ಶ್ರೀಮಂತ ರೈತರಿಗೆ ಉಪಯೋಗವಾಗುವ ಕೆಲವು ಅಂಶಗಳಿರುವುದನ್ನು ಗಮನಿಸಬೇಕು.

1) ಹಿಂದಿನ ಕಾಯಿದೆಯಲ್ಲಿ ಒಂದು ಸ್ಟಾಂಡರ್ಡ್ ಎಕ್ರೆ ಎಂದರೆ ಅತ್ಯುತ್ತಮವಾದ ನೀರಾವರಿ ಸೌಕರ್ಯವಿರುವ ಭೂಮಿ. ಹೊಸ ಕಾಯಿದೆಯಲ್ಲಿ ಒಂದು ಘಟಕ ಎಂದರೆ ಅತ್ಯುತ್ತಮವಾದ ಸರಕಾರಿ ನೀರಾವರಿ ಸೌಕರ್ಯವಿರುವ ಒಂದು ಎಕರೆ ಭೂಮಿ. ಖಾಸಗೀ ನೀರಾವರಿ ಸೌಕರ್ಯವಿರುವ ಒಂದು ಎಕ್ರೆ ಭೂಮಿಯನ್ನು ಒಂದು ಘಟಕ ಎಂದು ಪರಿಗಣಿಸಲಾಗುವುದಿಲ್ಲ. ಅಂತಹ ಭೂಮಿಗೆ 25 ಎಕ್ರೆಗಳಷ್ಟು ಗರಿಷ್ಠ ಮಿತಿ ಹೇರಲಾಗಿದೆ. ಹಿಂದಿನ ಕಾಯಿದೆಯಲ್ಲಿ 27 ಎಕ್ರೆಗಳಷ್ಟು ಗರಿಷ್ಠ ಮಿತಿ ಇತ್ತು. ಬದಲಾವಣೆ ಕಾಗದದಲ್ಲಿ ಮಾತ್ರ !

2) ಹಿಂದಿನ ಕಾಯಿದೆಯಂತೆ ಒಂದು ಕುಟುಂಬ ಎಂದರೆ ತಂದೆ ತಾಯಿ ಮತ್ತು ಎಲ್ಲಾ ಹೊಂದಿಕೊಂಡಿರುವವರು. ತಿದ್ದುಪಡಿ ಕಾಯಿದೆಯಂತೆ ತಂದೆ, ತಾಯಿ ಮತ್ತು ಅಪ್ರಾಯಸ್ಥ ಮಕ್ಕಳು ಮತ್ತು ಮದುವೆಯಾಗದ ಹೆಣ್ಣುಮಕ್ಕಳು. ಗಂಡುಮಗನೊಬ್ಬ 18 ವರ್ಷ ಪ್ರಾಯಕ್ಕೆ ಬಂದರೆ ಅವನದ್ದು ಪ್ರತ್ಯೇಕ ಕುಟುಂಬ ಎಂದು ಪರಿಗಣಿಸಿ ಅವನು ಸ್ವತಂತ್ರವಾಗಿ ನಿಗದಿತ ಗರಿಷ್ಠ ವಿಸ್ತಾರದ ಭೂಮಿಯನ್ನು ಹೊಂದಬಹುದು. ಅಂತಹ ಗಂಡುಮಕ್ಕಳು ಒಂದೇ ಮನೆಯಲ್ಲಿ ಅವಿಭಾಜ್ಯ ಕುಟುಂಬವಾಗಿದ್ದರೂ, ಒಂದೇ ಅಡುಗೆಮನೆಯಲ್ಲಿದ್ದರೂ, ವ್ಯವಸಾಯ ಒಟ್ಟಿಗೇ ಮಾಡುತ್ತಿದ್ದರೂ, ತಿದ್ದುಪಡಿ ಕಾಯಿದೆಯಂತೆ ಪ್ರಾಯಸ್ಥ ಗಂಡುಮಕ್ಕಳು ಪ್ರತಿಒಬ್ಬರೂ ಒಂದೊಂದು ಪ್ರತ್ಯಪ್ರತ್ಯೇಕ ಕುಟುಂಬವಿದ್ದಂತೆ. ಪರಿಣಾಮವಾಗಿ ಹತ್ತು ಸದಸ್ಯರಿರುವ- ಒಂದು ಕುಟುಂಬದಲ್ಲಿ ಐದು ಪ್ರಾಯಸ್ಥ ಗಂಡುಮಕ್ಕಳಿದ್ದರೆ, ಅತ್ಯುತ್ತಮವಾದ ಸರಕಾರಿ ನೀರಾವರಿ ಇರುವ 60 ಎಕ್ರೆಗಳಷ್ಟು $(10+5\times10 = 60)$ ವ್ಯವಸಾಯ ಭೂಮಿಯನ್ನು ಹೊಂದಬಹುದು; ಅತ್ಯುತ್ತಮವಾದ ಖಾಸಗೀ ನೀರಾವರಿ ಇರುವ 150 ಎಕ್ರೆಗಳಷ್ಟು $(25+5\times25 = 150)$ ವ್ಯವಸಾಯ ಭೂಮಿಯನ್ನು ಹೊಂದಬಹುದು. ದೊಡ್ಡ ಭೂಮಾಲಕರು, ಶ್ರೀಮಂತ ರೈತರು ತಮ್ಮದೇ ನೀರಾವರಿಗೆ ಬಂಡವಾಳ ಹೂಡುವುದಾದರೆ, ಅವರು ಹೆಚ್ಚು ವಿಸ್ತಾರದ ಭೂಮಿಯನ್ನು ಪಡೆಯಬಹುದು. ಹಿಂದಿನ ಕಾಯಿದೆಗಿಂತಲೂ ತಿದ್ದುಪಡಿ ಕಾಯಿದೆಯು ಅವರಿಗೆ ಹೆಚ್ಚು ಅನುಕೂಲವಾಗಿರುವುದನ್ನು ಗಮನಿಸಬೇಕು.

ಬಿಗಿ ಒಕ್ಕಲುತನ ಮಸೂದೆ

3) 1974 ರ ತಿದ್ದುಪಡಿ ಕಾಯಿದೆಯಲ್ಲಿ ಭೂಮಿತಿಗೆ ಸಂಬಂಧಿಸಿದ ಕಾಯಿದೆ (1) ಮತ್ತು (2) ರಲ್ಲಿ ತಿಳಿಸಿದಂತೆ 1960 ರ ದಶಕದ ಕಾಯಿದೆಗಿಂತಲೂ ಸಡಿಲವಾಗಿಯೇ ಇದೆ. ಆದರೆ, ಧನಿ-ಒಕ್ಕಲುಗಳಿಗೆ ಸಂಬಂಧಿಸಿದ ಕಾಯಿದೆಯು ಭಾಗ ಬಹಳ ಬಿಗಿಯಾಗಿದೆ. ತಿದ್ದುಪಡಿ ಕಾಯಿದೆಯಲ್ಲಿ ವಿಧವೆಯರಿಗೆ, ಅಪ್ರಾಯಸ್ಥರಿಗೆ, ಮದುವೆಯಾಗದ ಹೆಣ್ಣುಮಕ್ಕಳಿಗೆ, ಅಂಗವಿಕಲರಿಗೆ ಹಿಂದಿನ ಕಾಯಿದೆಯಂತೆ ಯಾವ ರಿಯಾಯಿತಿಯೂ ಇಲ್ಲ. ಈ ಅಸಹಾಯಕರ ಭೂಮಿಯೂ ನಿರ್ದಾಕ್ಷಿಣ್ಯವಾಗಿ ಒಕ್ಕಲುಗಳ ಒಡೆತನಕ್ಕೊಳಗಾಗುವುದು. ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಒಕ್ಕಲು ಬೇರೆ, ಉಳುವವ ಬೇರೆ ಇರಬಹುದು. ಉಳುವವ ಕೃಷಿಕಾರ್ಮಿಕನಿರಬಹುದು. 'ಉಳುವವನೇ ಹೊಲದೊಡೆಯ' ಎಂಬ ಸಮಾಜವಾದಿ ತತ್ವದ ಆಧಾರದ ಮೇಲೆ ಹೊಸ ತಿದ್ದುಪಡಿಯನ್ನು ಮಾಡಲಿಲ್ಲ. ಬದಲು ಒಕ್ಕಲು ಗೇಣಿದಾರ ಹೊಲದೊಡೆಯನಾಗಲು ಈ ತಿದ್ದುಪಡಿ ಕಾಯಿದೆಯು ಉದ್ದೇಶಿಸಿದೆ. ಕೃಷಿಕೂಲಿಗಾರರಿಂದ ವ್ಯವಸಾಯ ಮಾಡಿಸುವ ಗೇಣಿದಾರರೂ ಧನಿಗಳಿಂದ ಭೂಮಿ ಸ್ವಂತಮಾಡಿಕೊಳ್ಳಬಹುದು. ದೊಡ್ಡ ಹಿಡುವಳಿಯು ರೈತ ಇನ್ನಷ್ಟು ಭೂಮಿಯನ್ನು ಗೇಣಿಗೆ ಪಡೆದಿರುವುದಾದರೆ ಅದನ್ನೂ ಕಾಯಿದೆಗನುಸಾರವಾಗಿ ತನ್ನ ಸ್ವಂತಕ್ಕೆ ಮಾಡಿಕೊಳ್ಳಬಹುದು. ತಿದ್ದುಪಡಿ ಕಾಯಿದೆಯಲ್ಲಿ, ಭೂಮಿತಿಯು ಉದಾರವಾಗಿರುವುದರಿಂದ ಒಕ್ಕಲು ಮಸೂದೆ ದೊಡ್ಡ ಹಿಡುವಳಿಯ ರೈತ-ಒಕ್ಕಲುಗಳಿಗೆ ಅನುಕೂಲವಾಗಿಯೇ ಇದೆ. ಸಣ್ಣ ಹಿಡುವಳಿದಾರನೊಬ್ಬ ದೊಡ್ಡ ಹಿಡುವಳಿಯ ಒಕ್ಕಲಿಗೆ ಕಾರಣಾಂತರದಿಂದ ಗೇಣಿಗೆ ಭೂಮಿ ಕೊಟ್ಟಿದ್ದರೆ ಹೊಸ ಕಾಯಿದೆಯಂತೆ ಭೂಮಿ ದೊಡ್ಡ ಹಿಡುವಳಿಯ ಒಕ್ಕಲಿನದ್ದೇ ಸ್ವಂತವಾಗುವುದು. ಸಣ್ಣ ಹಿಡುವಳಿದಾರರು ಮತ್ತು ಅಸಹಾಯಕರು ನಿರ್ಗತಿಕರಾಗುವರು. ಇವರಿಗೆ ಹೊಸ ತಿದ್ದುಪಡಿ ಕಾಯಿದೆಯಲ್ಲಿ ಯಾವ ರಿಯಾಯಿತಿಯೂ ಇಲ್ಲ, ರಕ್ಷಣೆಯೂ ಇಲ್ಲ. ಸಿಗಬೇಕಾದ ಪರಿಹಾರವನ್ನೂ ನಗದಾಗಿ ವಿಳಂಬವಿಲ್ಲದೆ ಪಾವತಿಮಾಡುವುದೂ ಇಲ್ಲ. ಪ. ಬಂಗಾಳ ಮತ್ತು ಕೇರಳ ರಾಜ್ಯ ಸರಕಾರಗಳ ಭೂಮಸೂದೆಗಳಲ್ಲಿ ಇಂತಹ ನ್ಯೂನತೆಗಳಿಲ್ಲ.

ಶಿವಮೊಗ್ಗ ಜಿಲ್ಲೆ ಒಂದನ್ನು ಬಿಟ್ಟು ಇತರ ಹಳೇಮೈಸೂರು ಪ್ರದೇಶಗಳಲ್ಲಿ ಒಕ್ಕಲು ಪದ್ಧತಿಯೋ ವಿರಳ, ಕೇವಲ ಶೇ. 10ರಷ್ಟು ವ್ಯವಸಾಯ ಭೂಮಿ ಒಕ್ಕಲು ಪದ್ಧತಿಗೆ ಒಳಪಟ್ಟಿದ್ದಿರಬಹುದು. ಒಕ್ಕಲು ರೈತರಲ್ಲಿ ದೊಡ್ಡ ಹಿಡುವಳಿದಾರರೂ ಇದ್ದಾರೆ, ಸಣ್ಣ ಹಿಡುವಳಿದಾರರೂ ಇದ್ದಾರೆ. ಒಕ್ಕಲುತನ ಮಸೂದೆಯಿಂದ ಎರಡು ವರ್ಗದವರೂ ಪ್ರಯೋಜನ ಪಡೆಯಬಹುದಾದರೂ, ದೊಡ್ಡ ಹಿಡುವಳಿಯ ಒಕ್ಕಲು ರೈತರೇ ಕಾನೂನಿನ ಉಪಯೋಗ ಪಡೆದುಕೊಂಡು ಸಣ್ಣ ಹಿಡುವಳಿಯ ಧನಿಗಳಿಂದ ಭೂಮಿ ಸ್ವಂತ ಮಾಡಿಕೊಳ್ಳುವಂತಾಯಿತು. ಈ ಪ್ರದೇಶಗಳಲ್ಲಿ ಶೇ. 40ರಿಂದ 50ರಷ್ಟು ಭೂಮಿ ಕಳೆದುಕೊಂಡವರು ವಿಧವೆಯರು, ಅಪ್ರಾಯಸ್ಥರು, ಅಂಗವಿಕಲರು, ಸಣ್ಣ ಹಿಡುವಳಿದಾರರು. ಭೂಮಿ ಕಳೆದುಕೊಂಡವರಲ್ಲಿ ಶೇ. 30 ರಷ್ಟು ಸಣ್ಣ ಹಿಡುವಳಿದಾರರೇ ಆಗಿದ್ದರು ! ಹಳೇಮೈಸೂರಿನಲ್ಲಿ 'ಕ್ರಾಂತಿಕಾರಕ' ಒಕ್ಕಲುತನ ಮಸೂದೆ ಜಾರಿಗೆ ತರುವುದೆಂದರೆ ಹೆಚ್ಚಾಗಿ ದೊಡ್ಡ ಹಿಡುವಳಿದಾರರು ಸಣ್ಣ ಹಿಡುವಳಿದಾರರ ಭೂಮಿಸ್ವಾಧೀನ ಮಾಡಿಕೊಂಡಂತೆ !

ಉತ್ತರ ಕರ್ನಾಟಕದಲ್ಲಿಯೂ ಹೆಚ್ಚುಕಡಿಮೆ ಹಳೇಮೈಸೂರಿನ ಪರಿಸ್ಥಿತಿಯೇ. ಅಕ್ಟೋಬರ್ 80ರ ವರೆಗೆ ಭೂ ಒಡೆತನ ಪಡೆದ ಒಕ್ಕಲಿಗರ ಭೂಮಿಯು ಶೇ. 35ರಿಂದ ಶೇ. 55ರ ವರೆಗೆ ವಿಧವೆಯರಿಗೆ, ಅಪ್ರಾಯಸ್ಥರಿಗೆ, ಅಂಗವಿಕಲರಿಗೆ, ಸಣ್ಣ ಹಿಡುವಳಿದಾರರಿಗೆ ಸೇರಿದುದೇ ಆಗಿತ್ತು. ಈ ಪ್ರದೇಶದ ವ್ಯವಸಾಯ ಭೂಮಿಯ ಬಹುಪಾಲು ಒಣಭೂಮಿ ಎಂದೇ ವರ್ಗೀಕರಿಸಲ್ಪಟ್ಟು, ದೊಡ್ಡ ಭೂಮಾಲಕರೂ, ಶ್ರೀಮಂತ ಒಕ್ಕಲು-ರೈತರೂ ಅತ್ಯಧಿಕ ವಿಸ್ತೀರ್ಣದ ಭೂಹಿಡುವಳಿಯನ್ನು ಪಡೆಯುವಂತಾಯಿತು. ಘಟಪ್ರಭಾ ಮತ್ತು ಮಲಪ್ರಭಾ ನೀರಾವರಿ ಯೋಜನೆಗಳಿಂದಾಗಿ ಬಹುಭಾಗ ಸರಕಾರಿ ನೀರಾವರಿ ಇರುವ ಅತ್ಯುತ್ತಮ ಭೂಭಾಗವಾದರೂ ದಾಖಲೆಯಲ್ಲಿ ತಿದ್ದುಪಡಿಯಾಗದೆ ಗರಿಷ್ಠ ಗಾತ್ರದ ಈ ಭೂಭಾಗ ಗ್ರಾಮೀಣ ಗಣ್ಯರ ಹಿಡಿತದಲ್ಲಿಯೇ ಉಳಿಯುವಂತಾಯಿತು. 1980ರಲ್ಲಿ ಅಭಿವೃದ್ಧಿ ತೆರಿಗೆಯ ವಿರುದ್ಧ ನಡೆದ ಚಳುವಳಿಯ ಮುಂದಾಳುತನವನ್ನು ಹೆಚ್ಚಾಗಿ ಈ ಶ್ರೀಮಂತ ಹಿಡುವಳಿದಾರರೇ ವಹಿಸಿದ್ದರು. ಭೂಸುಧಾರಣಾ ಕಾರ್ಯ ಅವಸರದಲ್ಲಿ ಮುಕ್ತಾಯವಾಯಿತೆಂದು ತೀರ್ಮಾನಿಸಿದರೆ, ಶ್ರೀಮಂತ ರೈತರಿಗೇ ಪ್ರಯೋಜನ. ಕಾರಣ ಅವರ ಭೂಹಿಡುವಳಿಯ ಗರಿಷ್ಠ ಪ್ರಮಾಣ ನಿರ್ಣಯವಾದದ್ದು ಒಣ ಭೂಮಿ ಎಂದು. ಭೂಸುಧಾರಣಾ ಕಾರ್ಯಕ್ರಮ ಮುಗಿಯಿತೆಂದರೆ, ಈಗ ಸರಕಾರಿ ನೀರಾವರಿ ಇರುವ ಅತ್ಯುತ್ತಮ ಭೂಮಿಯೂ ದಾಖಲೆಯಲ್ಲಿ ಒಣ ಭೂಮಿ ಎಂದೇ ಇದ್ದು ಶ್ರೀಮಂತ ರೈತರಿಗೇ ಪ್ರಯೋಜನವಾಗುವುದು !

ಕರ್ನಾಟಕದ 19 ಜಿಲ್ಲೆಗಳಲ್ಲಿ ಉ. ಕನ್ನಡ, ದ. ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾತ್ರ 1974ರ ಭೂಸುಧಾರಣಾ ತಿದ್ದುಪಡಿ ಕಾಯಿದೆಯಿಂದ ಭಾರೀ ಪ್ರಮಾಣದಲ್ಲಿ ಒಕ್ಕಲು-ರೈತರಿಗೆ ಪ್ರಯೋಜನವಾಗಿದೆ. ಕಾರಣ, ಈ ಮೂರೂ ಜಿಲ್ಲೆಗಳಲ್ಲಿ ವ್ಯವಸಾಯ ಭೂಮಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಗೇಣಿಗೆ ಕೊಡಲಾಗಿತ್ತು. ಒಕ್ಕಲುಗಳಲ್ಲಿ ಬಹುಪಾಲು ಬಡವರು ಹಾಗೂ ಸಣ್ಣ ಹಿಡುವಳಿಗಾರರು. ಆದರೆ, ಈ ಪ್ರದೇಶಗಳಲ್ಲಿಯೂ ಕೆಲವು ದೊಡ್ಡ ಒಕ್ಕಲು-ರೈತರು 50ರ ದಶಕದಿಂದ ಬಲಗೊಳ್ಳುತ್ತಾ ಬಂದಿದ್ದಾರೆ. ಈ ಪ್ರತಿಷ್ಠಿತ ಒಕ್ಕಲುಗಳು ಬಡ ಒಕ್ಕಲಿಗರನ್ನೂ ಜೊತೆ ಸೇರಿಸಿ ಭೂಸುಧಾರಣೆ-ಒಕ್ಕಲುತನ ಮಸೂದೆ ಜಾರಿಗೆ ಬರಲು ಸಂಘಟಿತವಾಗಿ ಒತ್ತಾಯಿಸಲು ಯಶಸ್ವಿಯಾದರು. ಅವರಿಗೆ ದ. ಕ. ಜಿಲ್ಲೆಯಲ್ಲಿ ಕಮ್ಯುನಿಸ್ಟರ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಸೋಷಲಿಸ್ಟರ ಬೆಂಬಲವೂ ಸಿಕ್ಕಿತ್ತು. 1974ರ ತಿದ್ದುಪಡಿ ಬಂದಾಗ ಈ ಒಕ್ಕಲು ರೈತರು ಭೂಮಾಲಕರ ಭೂಹಿಡುವಳಿಯನ್ನು ತಮ್ಮ ಸ್ವಾಧೀನಕ್ಕೆ ಪಡೆಯುವಲ್ಲಿ ಯಶಸ್ವಿಯಾದರು. ಈ ಜಿಲ್ಲೆಗಳ

(7ನೇ ಪುಟ ನೋಡಿ)

ಪ್ರಚಂಡ ಯಶಸ್ವಿಯಾದ ಸಾರ್ವತ್ರಿಕ ಮುಷ್ಕರ

(3ನೇ ಪುಟದಿಂದ)

ತ್ತದಲ್ಲಿ ಸುಮಾರು 30 ಜನ ಮಹಿಳೆಯರು ಮೆರವಣಿಗೆ ಹೊರಡಿಸಿದಾಗ ಬಂಧನಕ್ಕೊಳಗಾಗಿದ್ದಾರೆ.

ಬಂಧಿತರಲ್ಲಿ ತಾಲ್ಲೂಕು ಜನತಾ ಪಕ್ಷದ ಅಧ್ಯಕ್ಷ ಶ್ರೀ ಡಿ. ನಾಗರಾಜಯ್ಯನವರೂ ಸೇರಿ ಒಟ್ಟು 120 ಜನರು ಸೇರಿದ್ದಾರೆ.

ಮುಷ್ಕರ ಮತ್ತು ಬಂದ್ ಯಶಸ್ವಿಮಾಡುವಲ್ಲಿ ಸಹಕರಿಸಿದ ನಾಗರಿಕರನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ಅಭಿನಂದಿಸಲಾಗಿದೆ.

ಮೈಸೂರು

144ನೇ ವಿಧಿಯನ್ವಯ ನಿಶೇಧಾಜ್ಞೆಯನ್ನು ವಿಧಿಸಲಾಗಿದ್ದರೂ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಕರೆಗೆ ಬೆಂಬಲವಾಗಿ 19-1-82 ರಂದು ನಡೆಸಲಾದ ಸಾರ್ವತ್ರಿಕ ಮುಷ್ಕರ ಹಾಗೂ ಮೈಸೂರು ಬಂದ್ ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಯಿತು. ನಗರದ ಕಾರ್ಮಿಕರು, ವ್ಯಾಪಾರಿಗಳು, ವಿದ್ಯಾರ್ಥಿ ಯುವಜನರು ಬಂದ್ ಕಾರ್ಯಕ್ರಮದಲ್ಲಿ ಪೂರ್ಣ ಭಾಗವಹಿಸಿ ಯಶಸ್ವಿಗೆ ನೆರವಾದರು. ನಗರದ ಎಲ್ಲಾ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟಿದ್ದವು. ಸರಕಾರಿ ಬಸ್ಸುಗಳು ಪ್ರಯಾಣಿಕರಿಲ್ಲದೆ ಖಾಲಿಯಾಗಿ ಓಡಾಡುತ್ತಿದ್ದವು. ಹೆಚ್ಚಿನ ರಿಕ್ಷಾ ಚಾಲಕರು ಬಂದ್‌ಗೆ ಬೆಂಬಲ ನೀಡಿ ರಸ್ತೆಗಿಳಿಯಲಿಲ್ಲ. ಓಡಾಡುತ್ತಿದ್ದ ಕೆಲವು ಕಾಂಗ್ರೈ ರಿಕ್ಷಾಗಳು ಪ್ರಯಾಣಿಕರಿಲ್ಲದೆ ಪರದಾಡಬೇಕಾಯಿತು. "ಮೈಸೂರು ಬಂದ್ ಇಲ್ಲ" "ಬಂದನ್ನು ತಿರಸ್ಕರಿಸಿ" ಎಂಬ ಇಂದಿರಾ ಗಾಂಧಿಯ ಫೋಟೋವುಳ್ಳ ವಾಲ್‌ಪೋಸ್ಟರುಗಳನ್ನು ಸಾವಿರ ಸಂಖ್ಯೆಯಲ್ಲಿ ನಗರದಾದ್ಯಂತ ಅಂಟಿಸಿ ಅದರ ಪರಿಣಾಮಕ್ಕಾಗಿ ಹುಮ್ಮಸ್ಸಿನಿಂದ 19ರಂದು ಕಾದು ನಿಂತಿದ್ದ ಕಾಂಗ್ರೆಸ್ (ಐ) ಮುಖಂಡರು, ವ್ಯಕ್ತಿಗಳು ಬಂದ್ ಯಶಸ್ಸಿನಿಂದಾಗಿ ತೀರಾ ಮುಖಭಂಗಿತರಾಗಬೇಕಾಯಿತು.

ಮೈಸೂರು ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿಯು ಮುಷ್ಕರದಲ್ಲಿ ಹಾಗೂ ಬಂದ್‌ನಲ್ಲಿ ರಾಜ್ಯ ಸರಕಾರಿ ನೌಕರರು ಯಾವ ರೀತಿಯಿಂದಲೂ ಭಾಗವಹಿಸಬಾರದೆಂದು ನೀಡಿದ್ದ ಕರೆಯನ್ನು ತಿರಸ್ಕರಿಸಿದ ರಾಜ್ಯ ಸರಕಾರಿ ನೌಕರರು 'ಕಪ್ಪುಬ್ಯಾಡ್ಜ್' ಧರಿಸಿ ಕಾರ್ಮಿಕರ ಈ ಚಾರಿತ್ರಿಕ ಹೋರಾಟಕ್ಕೆ ಬೆಂಬಲ ನೀಡಿದರು. ಅಂಚೆ ಮತ್ತು ತಂತಿ ನೌಕರರು 'ಕಪ್ಪು ಬ್ಯಾಡ್ಜ್' ಧರಿಸಿ ಸರಕಾರದ ಕಾರ್ಮಿಕವಿರೋಧಿ ನೀತಿಯನ್ನು ಪ್ರತಿಭಟಿಸಿದರು. ಜೀವವಿಮೆ ಮತ್ತು ಬ್ಯಾಂಕ್ ನೌಕರರು ಕೆಲಸಕ್ಕೆ ಹಾಜರಾಗದೆ, ತಮ್ಮ ಕಛೇರಿಗಳೆದುರು ಘೋಷಣೆ ಕೂಗಿ ಮೈಸೂರು ಬಂದ್‌ಗೆ ಪೂರ್ಣ ಬೆಂಬಲ ನೀಡಿದರು.

ಮೈಸೂರು ನಗರವು ಈ ಹಿಂದೆಂದೂ ಕಂಡಿರದಷ್ಟು (2000ಕ್ಕೂ ಮಿಕ್ಕಿ) ಪೋಲೀಸರನ್ನು ಜಮಾಯಿಸಲಾಗಿದ್ದು ನಗರದ ತುಂಬೆಲ್ಲಾ ಗಸ್ತುತಿರುಗುತ್ತಿದ್ದ ಪೋಲೀಸರೇ ಸಾರ್ವಜನಿಕರಿಗಿಂತ ಹೆಚ್ಚಾಗಿ ಕಂಡು ಬರುತ್ತಿದ್ದರು. ರಾಜ್ಯದ ಸಮಾಜ ಕಲ್ಯಾಣ ಸಚಿವ ಪಿ. ವೆಂಕಟ್ರಮಣ ಹಾಗೂ ವಿಧಾನಸಭಾ ಸದಸ್ಯ ಬಿ. ಎನ್. ಕೆಂಗೇಗೌಡರು ಪೋಲೀಸರೊಂದಿಗೆ ನಗರದಲ್ಲೆಲ್ಲಾ ಸುತ್ತಾಡಿ ಬಂದ್ ವಿಫಲಗೊಳಿಸಲು ಹಾಗೂ ಮುಚ್ಚಲ್ಪಟ್ಟಿದ್ದ ಅಂಗಡಿಗಳನ್ನು ಬಲತ್ಕಾರವಾಗಿ ತೆರಸುವ ವಿಫಲ ಪ್ರಯತ್ನ ನಡೆಸುತ್ತಿದ್ದದ್ದು ಕಂಡು ಬಂತು. ಕಾಂಗ್ರೈನ ಏಜಂಟರಂತೆ ವರ್ತಿಸಿದ ಪೋಲೀಸರು ಬಂದ್‌ನ ಹಿಂದಿನ ದಿನವೇ 125ರಷ್ಟು ಪ್ರಮುಖ ಕಾರ್ಮಿಕ ಹಾಗೂ ರಾಜಕೀಯ ಪಕ್ಷಗಳ ಮುಖಂಡರನ್ನು ಬಂಧಿಸಿದ್ದರು. ಸಾರ್ವತ್ರಿಕ ಮುಷ್ಕರದ ದಿನ ಸುಮಾರು 200ಕ್ಕೂ ಮಿಕ್ಕಿ ಕಾರ್ಮಿಕರನ್ನು ಹಾಗೂ ಅವರ ಮುಖಂಡರನ್ನು ಬಂಧನಕ್ಕೊಳಪಡಿಸಿದರು.

ರಾಷ್ಟ್ರೀಯ ಆಂದೋಲನ ಸಮಿತಿಯ ಮೈಸೂರಿನ ಸಂಚಾಲಕರಾದ ಸಿ.ಐ.ಟಿ.ಯು.ವಿನ ಕಾಂ. ಮೋಹನ್ ಕುಮಾರ್, ಎ.ಐ.ಟಿ.ಯು.ಸಿ.ಯ ಕಾಂ. ಎಚ್. ಕೆ. ರೆಹಮಾನ್, ಸಿ.ಪಿ.ಐ. ಮೈಸೂರು ಜಿಲ್ಲಾ ಕಾರ್ಯದರ್ಶಿ ಕಾಂ. ಸೋಮಸುಂದರ ಶರ್ಮ, ಜನತಾಪಕ್ಷದ ಮುಖಂಡರಾದ ಎ. ರಾಮಣ್ಣ, ವೇದಾಂತ ಹೆಮ್ಮಿಗೆ, ಕಾಂಗ್ರೆಸ್ (ಎಸ್) ಪಕ್ಷದ ತುಳಸೀದಾಸಪ್ಪ, ಎಲ್. ಚಿಕ್ಕರಂಗಪ್ಪ, ವಿದ್ಯಾರ್ಥಿ ಯುವಜನ ಹೋರಾಟ ಸಮಿತಿಯ ಆರ್. ಚಂದ್ರಶೇಖರ್, ನಾಗರಾಜ್, ಹೋಟೆಲು ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾಂ. ಪುಟ್ಟಪ್ಪ, ವಿಕ್ರಾಂತ್ ಟೈರ್ ಎಂಪ್ಲಾಯೀಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ. ರಾಜೇಂದ್ರ, ಉಪಾಧ್ಯಕ್ಷ ಕಾಂ. ಬಸಯ್ಯ, ಸಹ ಕಾರ್ಯದರ್ಶಿಗಳಾದ ಕಾಂ. ಕೃಷ್ಣ, ಕಾಂ. ಡೇವಿಡ್ ಪುರುಶೋತ್ತಮ ಹಾಗೂ ಕನ್ನಡ ಪಕ್ಷದ ಬೋಗನುದೀಶ್, ಶ್ರೀನಿವಾಸಮೂರ್ತಿ ಮತ್ತು ಕನ್ನಡ ಚಳುವಳಿಯ ಸಂಪಾತ್‌ಡವರುಗಳು ಬಂಧಿತರಾದವರಲ್ಲಿ ಪ್ರಮುಖ ಮುಂದಾಳುಗಳು.

ನಿಷೇಧಾಜ್ಞೆ ಇದ್ದಾಗ್ಯೂ ಶಾಂತಿಯುತವಾಗಿ ಮೆರವಣಿಗೆ ನಡೆಸಿದ ಸುಮಾರು 500ರಷ್ಟಿದ್ದ ವಿಕ್ರಾಂತ್ ಮತ್ತು ಜಾವಾ ಫ್ಯಾಕ್ಟರಿಯ ಕಾರ್ಮಿಕರ ಮೇಲೆ ಪೋಲೀಸರು ಅಮಾನುಷವಾಗಿ ಲಾಠೀಚಾರ್ಜು ನಡೆಸಿದರು. 20 ಜನರಿಗೆ ತೀವ್ರ ಗಾಯಗಳಾಗಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ. 9 ಜನ ವಿಕ್ರಾಂತ್ ಕಾರ್ಮಿಕರ ಮೇಲೆ ಸುಳ್ಳು ಕೇಸುಗಳನ್ನು ದಾಖಲುಮಾಡಲಾಗಿದೆ. ಪೋಲೀಸರ ಈ ದೌರ್ಜನ್ಯವನ್ನು ಮೈಸೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ.ಎನ್. ಉಗ್ರಪ್ಪ, ವಿದ್ಯಾರ್ಥಿ ಯುವಜನ ಹೋರಾಟ ಸಮಿತಿಯ ಸಂಚಾಲಕರು ಹಾಗೂ ರಾಜ್ಯ ಎಸ್.ಎಫ್.ಐ. ಅಧ್ಯಕ್ಷರಾದ ಕಾಂ. ಆರ್. ಜಯಕುಮಾರ್ ಮತ್ತು ವಿಕ್ರಾಂತ್ ಟೈರ್ ಎಂಪ್ಲಾಯೀಸ್ ಯೂನಿಯನ್ ಅಧ್ಯಕ್ಷರಾದ ಕಾಂ. ಡಿ. ಎ. ಚೆಲುವೇಂದ್ರರವರುಗಳು ತೀವ್ರವಾಗಿ ಖಂಡಿಸಿದ್ದಾರೆ. ಬಂದ್ ಯಶಸ್ವಿಯಾಗಲು ನೆರವಾದ ಸರ್ವರನ್ನೂ ಇವರು ಅಭಿನಂದಿಸಿದ್ದಾರೆ.

ರಾಯಚೂರು

ರಾಷ್ಟ್ರೀಯ ಆಂದೋಲನ ಸಮಿತಿಯ ಕರೆಯಂತೆ ರಾಯಚೂರಿನಲ್ಲಿ ಯಶಸ್ವೀ ಮುಷ್ಕರ ನಡೆಸಲಾಯಿತು. ಮುಂಜಾಗರೂಕತಾ ಕ್ರಮವಾಗಿ ಜ. 18ರಂದು ಕೆ. ಎಸ್. ಆರ್. ಟಿ. ಸಿ. ಯೂನಿಯನ್‌ನ ಇಬ್ಬರು ಮುಖಂಡರನ್ನು ಬಂಧಿಸಲಾಯಿತು. ಜ. 19ರಂದು ರಾಯಚೂರಿನ ಎಲ್ಲ ವಹಿವಾಟುಗಳು ಬಂದ್ ಆಗಿದ್ದವು. ಕಾಂಗ್ರೈ ಗೂಂಡಾಗಳು ಅಂಗಡಿಗಳನ್ನು ತೆರೆಸುವ ವಿಫಲಯತ್ನ ನಡೆಸಿದರು. ನಗರದಲ್ಲಿ ಖಾಕೀಬಟ್ಟೆಯವರ ಮತ್ತು ಕಾಂಗ್ರೈನವರ ಕಳವಳ ಓಡಾಟ ಹೆಚ್ಚಾಗಿತ್ತು.

ಸಾಯಂಕಾಲ ಸುಮಾರು 200 ಜನ ಕಾರ್ಮಿಕರು ಕರಾಳ ಶಾಸನಗಳನ್ನು ವಿರೋಧಿಸುವ ಘೋಷಣೆಗಳೊಂದಿಗೆ ಮೆರವಣಿಗೆ ತೆಗೆದರು. ಪೋಲೀಸರು ಮೆರವಣಿಗೆಯನ್ನು ಚದುರಿಸಿದರಾದರೂ ಕೆಲವು ಜನ ತಪ್ಪಿಸಿಕೊಂಡು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವಲ್ಲಿ ಯಶಸ್ವಿಯಾದರು. ಅಲ್ಲಿಂದ ವಾಪಸ್ ಆಗುವಾಗ ಎಸ್. ಎಫ್. ಐ., ಕೆ. ಎಸ್. ಆರ್. ಟಿ. ಸಿ. ಮತ್ತು ಸಿ. ಐ. ಟಿ. ಯು.ಗೆ ಸೇರಿದ ಹನ್ನೊಂದು ಜನರನ್ನು ಬಂಧಿಸಲಾಯಿತು.

ಧಾರವಾಡ

ಕಾಂ. ವಿ. ಎನ್. ಹಳಕಟ್ಟಿ (ಸಿ. ಐ. ಟಿ. ಯು.) ಮತ್ತು ಶ್ರೀ ಎ. ಜೆ. ಜೋಶಿ (ಬಿ. ಎಂ. ಎಸ್.) ಯವರ ಸಂಚಾಲಕತ್ವದಲ್ಲಿ ಎನ್. ಸಿ. ಸಿ. ಧಾರವಾಡ ಘಟಕ ಜ. 19ರ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸಿತ್ತು. ಧಾರವಾಡ ಎಲ್ಲಾ ಕಾರ್ಮಿಕ, ನೌಕರರ ಸಂಘಟನೆಗಳೂ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಎನ್. ಸಿ. ಸಿ. ಬೇಡಿಕೆಗಳನ್ನೊಳಗೊಂಡ ಸಹಸ್ರಾರು ಕರಪತ್ರ, ಭಿತ್ತಿಪತ್ರಗಳನ್ನು ಉಪಯೋಗಿಸಿ ಇಂದಿರಾ ಸರಕಾರದ ಅಪಪ್ರಚಾರವನ್ನು ಯಶಸ್ವೀ ರೀತಿಯಲ್ಲಿ ಹಿಮ್ಮೆಟ್ಟಿಸಲಾಯಿತು. ಜನಾಭಿಪ್ರಾಯ ಮುಷ್ಕರದ ಪರವಾಗಿ ತಿರುಗಿ ಎಲ್ಲಿಲ್ಲದ ಬೆಂಬಲದೊರಕಿತ್ತು.

ಹುಬ್ಬಳ್ಳಿಯಲ್ಲಿ ಕಾಂ. ಸದಾನಂದ್, ಎ. ಜೆ. ಮುಧೋಳ್ ಮುಂತಾದವರ ನೇತೃತ್ವದಲ್ಲಿ ಸಮಿತಿ ರಚಿಸಿ ಹುಬ್ಬಳ್ಳಿಯಲ್ಲಿ ಮುಷ್ಕರದ ತಯಾರಿ ನಡೆದಿತ್ತು. ಹಾವೇರಿ, ರಾಣಿಬೆನ್ನೂರು, ನರಗುಂದ ಮುಂತಾದೆಡೆ ಮುಷ್ಕರ ಯಶಸ್ವಿಯಾಗಿದೆ.

ಧಾರವಾಡ-ಹುಬ್ಬಳ್ಳಿ ಅವಳಿನಗರಗಳಲ್ಲಿ ವಿದ್ಯಾರ್ಥಿ-ಯುವಜನರು ಕಾರ್ಮಿಕರ ಮುಷ್ಕರಕ್ಕೆ ಬೆಂಬಲಿಸಿ ಯಶಸ್ವಿಗೊಳಿಸಲು ಶ್ರಮಿಸಿದರು.

ಮುಷ್ಕರದ ಹಿಂದಿನ ದಿನವೇ ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಧಾರವಾಡ, ನರಗುಂದ, ಗದಗ್, ಹಾವೇರಿ, ರಾಣಿಬೆನ್ನೂರುಗಳಲ್ಲಿ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿತ್ತು. ಧಾರವಾಡದಲ್ಲಿ ವಿ. ಎನ್. ಹಳಕಟ್ಟಿ, ಎಂ. ಬಿ. ಕಟ್ಟಿ, ವಿ. ಜಿ. ಕಮ್ಮಾರ ಇವರನ್ನು ಬಂಧಿಸಲಾಯಿತು. ಹುಬ್ಬಳ್ಳಿಯಲ್ಲಿ ಕಾಂ. ಕೆ. ವಿ. ರಾಯಚೂರ, ವಿ. ಎಂ. ಪೂಜಾರ, ಗಡದ ಇವರುಗಳಲ್ಲದೇ ಎ. ಐ. ಟಿ. ಯು. ಸಿ.ಯ ಕಾಂ. ಎ. ಜೆ. ಮುಧೋಳ ಮತ್ತಿತರರನ್ನು ಬಂಧಿಸಲಾಗಿತ್ತು. ಹುಬ್ಬಳ್ಳಿಯಲ್ಲಿ ಲಾಠೀ ಪ್ರಹಾರವೂ ನಡೆದಿದೆ. ರಾಣಿಬೆನ್ನೂರಿನಲ್ಲಿ ಕಾಂ. ಎಸ್. ಎಫ್. ಕ್ಯಾದಗಿ ಮತ್ತಿತರರನ್ನು ಬಂಧಿಸಲಾಗಿತ್ತು.

ಜಿಲ್ಲೆಯಾದ್ಯಂತ ಮುಷ್ಕರ ಬಂದ್ ಬಹುತೇಕ ಯಶಸ್ವಿಯಾಗಿ ನಡೆದಿದೆ.

ಬಿಜಾಪುರ

ಇಂದಿರಾ ಪಕ್ಷದ, ಸರಕಾರದ ಅಪಪ್ರಚಾರ, ದಬ್ಬಾಳಿಕೆಗಳನ್ನೆಲ್ಲ ಕಡೆಗಣಿಸಿ, ಬಿಜಾಪುರ ಜಿಲ್ಲೆಯ ದುಡಿಯುವ ವರ್ಗ ಹಾಗೂ ಜನತೆ 19ರ ಮಹಾಮುಷ್ಕರ-ಪ್ರತಿಭಟನಾ ದಿನವನ್ನು ಯಶಸ್ವಿಗೊಳಿಸಿತು.

ಎಲ್ಲ ವಿರೋಧಿ ಪಕ್ಷದವರು, ಕಾರ್ಮಿಕ ಸಂಘ, ರೈತ ಸಂಘ, ವಿದ್ಯಾರ್ಥಿ ಸಂಘಟನೆಗಳೆಲ್ಲ ಜಿಲ್ಲಾ ಮಟ್ಟದ, ತಾಲ್ಲೂಕ ಮಟ್ಟದ ಸಭೆ ಕರೆದು, ಕರಪತ್ರ ಹಂಚಿ, ಸುವ್ಯವಸ್ಥಿತವಾಗಿ ಕೆಲಸ ಮಾಡಿದ್ದರು. ತಾ॥ 18ರಂದು ರಾತ್ರಿಯಲ್ಲೇ ಮುಖಂಡರನ್ನೆಲ್ಲ ಮುಂಜಾಗ್ರತಾ ಕ್ರಮವೆಂದು ಬಂಧಿಸಿದ್ದರು. ಇದರಿಂದ ಮತ್ತಷ್ಟು ಹುರುಪುಗೊಂಡ ಕಾರ್ಯಕರ್ತರು ನಿರ್ಧರಿಸಿದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದರು. ಬಿಜಾಪುರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲೂ ಮುಖಂಡರನ್ನು ಬಂಧಿಸಿದ್ದರೂ ಕೂಡ, ಮೆರವಣಿಗೆ, ಪ್ರತಿಭಟನೆ ಕಾರ್ಯಕ್ರಮಗಳಾಗಿ ನೂರಾರು ಮಂದಿ ಬಂಧನಕ್ಕೊಳಗಾದರೂ, ವಿದ್ಯಾರ್ಥಿಗಳೂ, ರೈತರೂ ಈ ಮೆರವಣಿಗೆಗಳಲ್ಲಿ ಪಾಲ್ಗೊಂಡು ಬಂಧಿತರಾದರು. ಬಿಜಾಪುರ, ಬಾಗಲಕೋಟೆಗಳಲ್ಲಿ ನೂಲಿನ ಗಿರಣಿ ಕೆಲಸಗಾರರ ಮೇಲೆ ಲಾಠಿಚಾರ್ಜ್ ಮಾಡಲಾಯಿತು. ಬಿಜಾಪುರದಲ್ಲಿ ಜನತಾ ಪಾರ್ಟಿಯ ಪ್ರಕಾಶವಾಗಣಸೂರ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ವಿ. ಆರ್. ಸಾಕ್ರೆ, ಹಾಗೂ ವಿದ್ಯಾರ್ಥಿ, ರೈತಸಂಘದ ಕಾರ್ಯಕರ್ತರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಸಾವಂತ ಎಂಬ ಎ.ಎಸ್.ಐ. ಹೊಡೆದಿದ್ದರೂ ಜನತೆ ಅಂಜದೆ ಪ್ರತಿಭಟನೆ ವ್ಯಕ್ತಮಾಡಿದರು. ಬಿಜಾಪುರ ಜಿಲ್ಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಭಾರತ ಕಮ್ಯುನಿಸ್ಟ್ ಪಾರ್ಟಿ, ಜನತಾ ಪಾರ್ಟಿ, ಕಾಂಗ್ರೆಸ್ (ಎಸ್), ಭಾರತೀಯ ಜನತಾ ಪಾರ್ಟಿ, ಲೋಕದಳ, ರಿಪಬ್ಲಿಕನ್ ಪಾರ್ಟಿ, ಮುಸ್ಲಿಂ ಲೀಗ್ ಹಾಗೂ ರೈತಸಂಘ, ವಿದ್ಯಾರ್ಥಿ ಸಂಘಟನೆಗಳ, ಕಾರ್ಮಿಕ ಸಂಘಟನೆಗಳ 300ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿತ್ತು. ನೂರಾರು ಮಂದಿ ರೈತರು ಡೊಳ್ಳು-ಹಲಗೆ ಬಾರಿಸುತ್ತ ಬಿಜಾಪುರದಲ್ಲಿ ಮೆರವಣಿಗೆ ತೆಗೆದಾಗ ಅವರನ್ನೆಲ್ಲ ಡೊಳ್ಳು-ಹಲಗೆ ಸಮೇತ ಬಂಧಿಸಲಾಗಿರುವುದು ಈ ಹೋರಾಟದ ವೈಶಿಷ್ಟ್ಯ. 200 ಟಾಂಗಾ, ಆಟೋರಿಕ್ಷಾದವರೆಲ್ಲ ಈ ಮೆರವಣಿಗೆಯಲ್ಲಿ ಪಾಲ್ಗೊಳ್ಳುವವರಿದ್ದರು. ಆದರೆ ಪೋಲೀಸರ ದಬ್ಬಾಳಿಕೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಹಿರಿಯ ಮುಖಂಡರೆಲ್ಲ ಬಂಧನದಲ್ಲಿದ್ದರೂ ಕೂಡ, ಕಾಂ. ಜಕ್ರಿಯಾಸಾಬ ಕಾಲೇಬಾಗ, ವಿ. ಎಂ. ಸೊನ್ನದ (ಸಿ.ಪಿ.ಎಂ.) ಅಪ್ಪಸಾಬ ಯರನಾಳ, ಹಿಪ್ಪರಗಿ (ಸಿ.ಪಿ.ಐ.) ಐ. ಸಿ. ನಾಗರಾಣ, ಐ. ಬಿ. ಹಿರೇಮಠ (ಜನತಾ) ಪಾಯಣ್ಣವರ, ಪೀರಬಾಷೆ (ಕಾಂಗ್ರೆಸ್ (ಎಸ್)), ಮುಲ್ಕಿಹಾಳ (ರಿಪಬ್ಲಿಕನ್) ಮೊದಲಾದ ಮುಖಂಡರೆಲ್ಲ ಕಾರ್ಮಿಕರಿಗೆ ಮಾರ್ಗದರ್ಶನ ಮಾಡಿ, ಸಭೆ, ಮೆರವಣಿಗೆ ಮಾಡುವುದರಲ್ಲಿ ಯಶಸ್ವಿಯಾಗಿ ತಾವೂ ಬಂಧಿತರಾದರು.

ಬಿಜಾಪುರ ಜಿಲ್ಲೆಯ ಬಾಗಲ್‌ಕೋಟೆ ಮತ್ತಿತರ ಕಡೆ ಮುಷ್ಕರ ಯಶಸ್ವಿಯಾಗಿದೆ. ಮುಷ್ಕರವನ್ನು ಬೆಂಬಲಿಸಿ ಬಂದ್‌ಗೆ ಕರೆ ನೀಡಲಾಗಿತ್ತು. ಎಲ್ಲಾ ವಹಿವಾಟುಗಳು ಬಂದಾಗಿದ್ದವು.

ಜೀವವಿಮೆ, ಬ್ಯಾಂಕು, ಸಹಕಾರಿ ನೂಲಿನ ಗಿರಣಿ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಸ್ಥಳೀಯ ನ್ಯಾಯವಾದಿಗಳು ಮುಷ್ಕರ ಬೆಂಬಲಿಸಿ ನ್ಯಾಯಾಲಯಗಳಿಗೆ ಬಹಿಷ್ಕಾರ ಹಾಕಿದ್ದರು.

18-1-82ರಂದೇ ಸಿ. ಪಿ. ಐ. (ಎಂ)ನ ಕಾಂ. ಡಿ. ಎಂ. ಖಿಲಾಸಿ, ಸಾಬಣ್ಣ, ಹುನಕುಂಟಿ ಹಾಗೂ ನೂಲಿನ ಗಿರಣಿ ಕಾರ್ಮಿಕ ಮುಖಂಡ ಎಲ್. ಡಿ. ಲವಣಿ, ಕಟ್ಟಿಮನಿ ಹಾಗೂ ಗಲಗಲಿಯವರನ್ನು ಬಂಧಿಸಲಾಗಿತ್ತು.

ಮುಷ್ಕರ, ಬಂದ್ ಯಶಸ್ವಿಗೊಳಿಸಿದ್ದಕ್ಕಾಗಿ ಸಮಸ್ತ ನಾಗರಿಕರಿಗೆ ವಿರೋಧ ಪಕ್ಷಗಳ ಪರವಾಗಿ ಕಾಂ. ಡಿ. ಎಂ. ಖಿಲಾಸಿ ಕೃತಜ್ಞತೆ ಸೂಚಿಸಿದ್ದಾರೆ.

ಈ ಮೇಲ್ಕಾಣಿಸಿದ ಸ್ಥಳಗಳಲ್ಲಿ ಅಲ್ಲದೇ ಕೋಲಾರ, ಉ.ಕ., ಬೀದರ್,

(ಕಡೇ ಪುಟ ನೋಡಿ)

ಪ್ಲೈವುಡ್ ಕಾರ್ಖಾನೆಯ ಆಡಳಿತವರ್ಗದ ಅಪ್ರಮಾಣಿಕ ನಡವಳಿಕೆ

ಇಂಡಿಯನ್ ಪ್ಲೈವುಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿಯ ಆಡಳಿತವರ್ಗ ತನ್ನ ಉದ್ಯೋಗಿಗಳ ಒಗ್ಗಟ್ಟನ್ನು ಮುರಿಯಲು ಟೊಂಕಕಟ್ಟಿ ನಿಂತಿದೆ. ಅದರ ಮುಖ್ಯ ಕಾರ್ಖಾನೆ ಹಾಗೂ ಮುಖ್ಯ ಕಾರ್ಯಾಲಯವಿರುವ ದಾಂಡೇಲಿಯಲ್ಲಿ ಯೂನಿಯನ್ ಇರಲಿಲ್ಲ. ಕಳೆದ ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಸುಲಭವಾಗಿ ಗುಂಡು ಹಾರಿಸಲು ಸದಾ ಸಿದ್ಧರಿರುವ ಪೋಲೀಸರ ಸಹಾಯದಿಂದ ಕಾರ್ಮಿಕರ ಹೋರಾಟವನ್ನು ಬಗ್ಗುಬಡಿಯುವುದು ಈ ಕುಖ್ಯಾತ ಆಡಳಿತವರ್ಗಕ್ಕೆ ಸಾಧ್ಯವಾಗಿತ್ತು. ಪೋಲೀಸ್ ಠಾಣೆ ಆಗ ಒಂದು ಹಿಂಸಾ ಕೊಠಡಿಯಾಗಿ ಬಿಟ್ಟಿತ್ತು. ನೂರಾರು ಕಾರ್ಮಿಕರನ್ನು ಹಾಗೂ ಅವರ ನಾಯಕರನ್ನು ದಾಂಡೇಲಿಯಿಂದ ಹೊರಗಟ್ಟಿ ಯಥಾಪ್ರಕಾರ ಚಮಚಾಗಳ ಸಹಾಯದಿಂದ ಒಂದು 'ಒಪ್ಪಂದ'ವನ್ನು ಕಾರ್ಮಿಕರ ತಲೆಮೇಲೆ ಹೇರಲಾಗಿತ್ತು.

ಆಡಳಿತವರ್ಗ ತನಗೆ ಸಿ. ಐ. ಟಿ. ಯು. ಬಗ್ಗೆ ವಿರೋಧವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರೊಂದಿಗೆ ವ್ಯವಹರಿಸುತ್ತಿದ್ದೇವೆ ಎಂದು ಹೇಳುತ್ತಾ ಬಂದಿತ್ತು. ಇದು ಎರಡು ನಾಲಗೆಯವರ ಮಾತು – ಕಾರ್ಮಿಕರು ಸುಸಂಘಟಿತರಾಗಿದ್ದಲ್ಲಿ ಅವರಿಗೆ ತಲೆಬಾಗುವುದು, ತನ್ನ ಭಯಾನಕ ದುರುದ್ದೇಶ ಕಾರ್ಮಿಕರಿಗೆ ಇನ್ನೂ ಅರಿವಾಗಿಲ್ಲವೆಂದು ಕಂಡುಬಂದಲ್ಲಿ ಬೆನ್ನಹಿಂದೆ ಇರಿಯುವುದು.

ದಾಂಡೇಲಿಯ ಪ್ಲೈವುಡ್ ಕಾರ್ಮಿಕರ ಸಂಘ ಕಾಂ. ವಿ.ಜೆ.ಕೆ. ನಾಯರ್‌ರವರು ಅಧ್ಯಕ್ಷರಾಗಿ, ಕಾಂ. ಎಂ. ಬಿ. ಕಟ್ಟಿ ಪ್ರಧಾನಕಾರ್ಯದರ್ಶಿಯಾಗಿರುವ ಹೊಸ ನಾಯಕತ್ವವನ್ನು ಆರಿಸಿದೆಯೆಂಬುದು ತಿಳಿದುಬಂದಾಗ ಕಂಪೆನಿಯ ನಾಲ್ಕು ಘಟಕಗಳ ಕಾರ್ಮಿಕರು ಸಿ. ಐ. ಟಿ. ಯು. ಬಾವುಟದಡಿ ದೃಢ ಸಂಘಟನೆಮಾಡಿಕೊಳ್ಳುತ್ತಿದ್ದಾರೆ ಎಂದು ಅವರಿಗೆ ತಿಳಿಯಿತು. ಆದ್ದರಿಂದ ತಕ್ಷಣ ದಾಂಡೇಲಿಯಲ್ಲಿ ಯೂನಿಯನ್ನನ್ನು ಪ್ರಾರಂಭಿಸಿದವರ ಪೈಕಿ ಒಬ್ಬರಾದ ಕೆ. ಟಿ. ನಾಯಕ್ ಅವರನ್ನು ಸರಿಯಾದ ಚಾರ್ಜ್‌ಶೀಟ್, ವಿಚಾರಣೆ ಅಥವಾ ನೋಟೀಸ್ ಇಲ್ಲದೆ ವಜಾಮಾಡಿದರು. ಧಾರವಾಡ ಘಟಕದ ಉಪಾಧ್ಯಕ್ಷರೂ ಆಗಿರುವ ಕಾಂ. ಕಟ್ಟಿಯವರ ಮೇಲೆ ಯೂನಿಯನ್ ಸಭೆ ನಡೆಸಿದ್ದಕ್ಕೆ ಚಾರ್ಜ್‌ಶೀಟ್ ಹೊರಿಸಿದ್ದಾರೆ. ದಾಂಡೇಲಿ ಯೂನಿಯನ್‌ಗೆ ಹೊಸದಾಗಿ ಉಪಾಧ್ಯಕ್ಷರಾಗಿ ಚುನಾಯಿತರಾದ ವೀರಭದ್ರ ಪತ್ತಾರ ಅವರ ತಂದೆಯವರ ಸಹಾಯದಿಂದ ಅವರು ರಾಜೀನಾಮೆ ಪತ್ರ ಸಲ್ಲಿಸುವಂತೆ ಬಲವಂತ ಮಾಡಲಾಗಿದೆ. ಧಾರವಾಡ ಹಾಗೂ ದಾಂಡೇಲಿಯ ಯೂನಿಯನ್‌ಗಳನ್ನು ಮುರಿದು ನಾಲ್ಕೂ ಘಟಕಗಳ ಕಾರ್ಮಿಕರು ಒಂದಾಗದಂತೆ ಮಾಡುವ ಆಸೆಯನ್ನು ಆಡಳಿತವರ್ಗ ಇಟ್ಟುಕೊಂಡಿದೆ.

ದಾಂಡೇಲಿಯಲ್ಲಿ ಹೇರಿದ ಅನ್ಯಾಯದ ಶರತ್ತುಗಳಿಗೆ ಒಪ್ಪುವಂತೆ ಧಾರವಾಡದ ಯೂನಿಯನ್ ಮೇಲೆ ವಿಪರೀತ ಒತ್ತಾಯ ಹೇರಲಾಗುತ್ತಿದೆ. ಅದನ್ನು ಕಾರ್ಮಿಕರು ಬಲವಾಗಿ ಎದುರಿಸುತ್ತಿದ್ದಾರೆ. ಒಗ್ಗಟ್ಟನ್ನು ಮುರಿಯುವ ಆಡಳಿತವರ್ಗದ ಪ್ರಯತ್ನದ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯ ಘಟಕಗಳ ಕಾರ್ಮಿಕರು ಧಾರವಾಡ ಹಾಗೂ ದಾಂಡೇಲಿಯ ಕಾರ್ಮಿಕರ ಹಿಂದೆ ಬಲವಾಗಿ ನಿಲ್ಲುತ್ತಾರೆಂದು ನಿರೀಕ್ಷಿಸಲಾಗಿದೆ.

●

ಸ್ಟೈಫಂಡರಿ ಪದವೀಧರರ ಮೇಲೆ

ವಾಟಾಳ್ ಶಿಷ್ಯರ ಹಲ್ಲೆ

22–1–82ರಂದು ಧಾರವಾಡಕ್ಕೆ ಸ್ಟೈಫಂಡರಿ ಪದವೀಧರರನ್ನು ಉದ್ದೇಶಿಸಿ ಮಾತನಾಡಲು ಗುಂಡೂರಾಯರ ಬಲಗೈ ಬಂಟ (!) ವಾಟಾಳ್ ನಾಗರಾಜ್ ಬಂದಿದ್ದರು. ಸ್ಟೈಫಂಡರೀ ಪದವೀಧರರಿಂದ ಪ್ರತಿಭಟನೆಯನ್ನು ನಿರೀಕ್ಷಿಸಿ ತಮ್ಮೊಂದಿಗೆ ಬೆಂಗಳೂರಿನ 8-10 ಗೂಂಡಾಗಳನ್ನೂ ಕರೆತಂದಿದ್ದರು.

ಈಗಾಗಲೇ ವಾಟಾಳರ ಬೋಗಸ್ ಆಶ್ವಾಸನೆಗಳಿಂದ, ಮೋಸತನದಿಂದ ಬೇಸರಗೊಂಡಿರುವ ಸ್ಟೈಫಂಡರೀ ಪದವೀಧರರು ರಾಜ್ಯ ಸ್ಟೈಫಂಡರೀ ಪದವೀಧರರು 'ರಾಜ್ಯ ಸ್ಟೈಫಂಡರಿ ಕ್ರಿಯಾಸಮಿತಿ' ಎಂಬ ವೇದಿಕೆಯನ್ನು ರಚಿಸಿಕೊಂಡು ಅಧಿಕಾರಸ್ಥರನ್ನು ಓಲೈಸುವ ಮಾರ್ಗಬಿಟ್ಟು ಹೋರಾಟದ ಹಾದಿ ಹಿಡಿದಿದ್ದಾರೆ.

ಈ ಕ್ರಿಯಾಸಮಿತಿಯವರು 22ರಂದು ಧಾರವಾಡಕ್ಕೆ ಬಂದಿದ್ದ ವಾಟಾಳರ ಮೋಸವನ್ನು ಬಹಿರಂಗಗೊಳಿಸಿ ಮತಪ್ರದರ್ಶನ ಮಾಡಿದರು. ಶಾಂತರೀತಿಯಿಂದ ಮತಪ್ರದರ್ಶನ ಮಾಡುತ್ತಿದ್ದ ಸ್ಟೈಫಂಡರೀ ಪದವೀಧರರ ಮೇಲೆ ವಾಟಾಳ್ ಶಿಷ್ಯರು ಹಲ್ಲೆಮಾಡಿದ ಘಟನೆ ವರದಿಯಾಗಿದೆ. ಈ ಹಲ್ಲೆಯನ್ನು ಮತಪ್ರದರ್ಶಕರು ಧೈರ್ಯದಿಂದ ಎದುರಿಸಿದ್ದಾರೆ.

ದಿನಾಂಕ 23ರಂದು ಹಲ್ಲೆಯನ್ನು ಪ್ರತಿಭಟಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕ್ರಿಯಾಸಮಿತಿಯ ಆಶ್ರಯದಲ್ಲಿ ಮತಪ್ರದರ್ಶನ ನಡೆಸಿದ್ದಾರೆ.

ವಾಟಾಳ ಭಂಡತನವನ್ನು ಪ್ರತಿಭಟಿಸಿ ನಡೆದ ಪ್ರದರ್ಶನಕಾರರ ಮೇಲಿನ ಹಲ್ಲೆಯನ್ನು ಡಿ.ವೈ.ಎಫ್.ಐ. ರಾಜ್ಯಘಟಕದ ಅಧ್ಯಕ್ಷ ಕಾಂ. ವಿ. ಜೆ. ಕಮ್ಮಾರ ಉಗ್ರವಾಗಿ ಖಂಡಿಸಿದ್ದಾರೆ. ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಈ ಗೂಂಡಾಗಿರಿ ಘಟನೆಯನ್ನು ಖಂಡಿಸಬೇಕೆಂದು ಮನವಿ ಮಾಡಿದ್ದಾರೆ.

●

ಕರ್ನಾಟಕದಲ್ಲಿ ಭೂಸುಧಾರಣೆ

(5ನೇ ಪುಟದಿಂದ)

ಲ್ಲಿಯೂ ಅಪ್ರಾಯಸ್ಥರೂ, ವಿಧವೆಯರೂ, ಅಂಗವಿಕಲರೂ, ಸಣ್ಣ ಹಿಡುವಳಿಗಾರರೂ ತಮ್ಮ ಸ್ವಂತ ಭೂಮಿಯನ್ನು ಒಕ್ಕಲುಗಳಿಗೆ ಕಳೆದುಕೊಂಡು ನಿರ್ಗತಿಕರಾಗಿರುವ ಅನೇಕ ನಿದರ್ಶನಗಳಿವೆ.

ರಾಜಕೀಯ ಲಾಭ

1974ರ ಭೂಸುಧಾರಣಾ ಕಾಯಿದೆಯಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗ್ರಾಮೀಣ ಪ್ರತಿಷ್ಠಿತವರ್ಗದ ರಾಜಕೀಯ ಹಿತಾಸಕ್ತಿಗಳು ಇನ್ನಷ್ಟು ಬಲಗೊಂಡವು. ಹಳೇಮೈಸೂರು, ಮತ್ತು ಉತ್ತರ ಕರ್ನಾಟಕ ಪ್ರದೇಶಗಳ ದೊಡ್ಡ ಭೂಮಾಲಕರೂ ಶ್ರೀಮಂತ ರೈತರೂ ಮೊದಲಿನಿಂದಲೂ ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಗಣನೀಯ ಪಾಲುದಾರರಾಗಿದ್ದರು. ಹೊಸ ಮಸೂದೆಯಿಂದ ಅವರ ಭೂಹಿಡುವಳಿಗಳಿಗೆ, ಆರ್ಥಿಕತೆಗೆ ಹೆಚ್ಚಿನ ಧಕ್ಕೆ ಆಗಲಿಲ್ಲ. ಸಡಿಲು ಭೂಮಿತಿ ಕಾಯಿದೆ, ನೀರಾವರಿ ಭೂಮಿಯನ್ನು ಒಣ ಭೂಮಿಯನ್ನಾಗಿಯೇ ವರ್ಗೀಕರಿಸಿದ್ದು, ಅವಸರವಾಗಿ ಕಾನೂನು ಜಾರಿಮಾಡಿದ್ದು, ಟ್ರಿಬ್ಯೂನಲ್‌ಗಳಲ್ಲಿ ಪ್ರಾತಿನಿಧ್ಯ-ಈ ಎಲ್ಲಾ ವಿಧಾನಗಳಿಂದ ಈ ಪ್ರದೇಶದ ದೊಡ್ಡ ಭೂಮಾಲಕರ ಹಾಗೂ ಶ್ರೀಮಂತ ರೈತರ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಯಾಗಿ ರಾಜಕೀಯ ಬೆಂಬಲ ಗಟ್ಟಿಯಾಯಿತು. ಜೊತೆಗೇ, ದ. ಕನ್ನಡ, ಉ. ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮೇಲಿನ ಕಾರಣಗಳಲ್ಲದೆ ಬಿಗಿಯಾದ ಒಕ್ಕಲುತನ ಮಸೂದೆಯನ್ನು ಜಾರಿಗೊಳಿಸಿದುದರಿಂದ ದೊಡ್ಡ ಹಿಡುವಳಿಯ ಒಕ್ಕಲು ರೈತರಿಂದ ಸಣ್ಣ ಹಿಡುವಳಿಯ ಒಕ್ಕಲು ರೈತರವರೆಗೆ ಆರ್ಥಿಕ ಲಾಭವಾಗಿ ಅವರ ರಾಜಕೀಯ ಬೆಂಬಲವೂ ದಕ್ಕುವಂತಾಯಿತು. ರಾಜ್ಯದ ರಾಜಕೀಯ ಅಧಿಕಾರದಲ್ಲಿ ಇದುವರೆಗೆ ವಂಚಿತರಾದ ಈ ಪ್ರದೇಶದ ಸಂಘಟಿತ ಒಕ್ಕಲು-ರೈತರು ಈಗ ಅಧಿಕಾರದಲ್ಲಿ ಪಾಲು ಪಡೆದರು. ಈ ಮೂರು ಜಿಲ್ಲೆಗಳಲ್ಲಿ ಗ್ರಾಮೀಣ ಜನರ ಬಲವನ್ನು ಕಮ್ಯುನಿಸ್ಟರಿಂದ ಮತ್ತು ಸೋಷಲಿಸ್ಟರಿಂದ ವಿಮುಖಗೊಳಿಸಲು ಸಾಧ್ಯವಾಯಿತು. ಆಳುವ ಪಕ್ಷವಾದ ಇಂದಿರಾ ಕಾಂಗ್ರೆಸ್‌ನ ಬಲವರ್ಧನೆ ಆಯಿತು. ಉತ್ತರ ಭಾರತದಲ್ಲಿ ದೊಡ್ಡ ಭೂಮಾಲಕರೂ ಶ್ರೀಮಂತ ರೈತರೂ ಭೂಮಿತಿ ಕಾಯಿದೆ ಹಾಗೂ ಒಕ್ಕಲು ಮಸೂದೆಯನ್ನು ಜಾರಿಗೊಳಿಸಲು ಪ್ರಬಲವಾಗಿ ವಿರೋಧಿಸುತ್ತಿರುವ ಕಾಲಘಟ್ಟದಲ್ಲಿಯೇ ಕರ್ನಾಟಕದಲ್ಲಿ ಅಂತಹ ಕಾಯಿದೆಗಳನ್ನು ಜಾರಿಗೊಳಿಸಿಯೂ ದೊಡ್ಡ ಭೂಮಾಲಕರ, ಶ್ರೀಮಂತ ಹಾಗೂ ಬಡರೈತರ ರಾಜಕೀಯ ಬೆಂಬಲ ಪಡೆಯಲು ಇಂದಿರಾ ಕಾಂಗ್ರೆಸ್ ಯಶಸ್ವಿಯಾಯಿತು. ಲ್ಯಾಂಡ್ ಟ್ರಿಬ್ಯೂನ್‌ಗಳಿಗೆ ಯಾರು ಧನಿ/ಒಕ್ಕಲು, ಯಾವ/ಎಷ್ಟು ಭೂಮಿ ಯಾರದ್ದು ಎಂಬಿತ್ಯಾದಿ ಮುಖ್ಯ ಪ್ರಶ್ನೆಗಳನ್ನು ನಿರ್ಧರಿಸುವ ಮಹತ್ವದ ಅಧಿಕಾರವಿರುವುದರಿಂದ ಟ್ರಿಬ್ಯೂನಲ್ ಸದಸ್ಯತ್ವವೂ ಆಳುವ ಪಕ್ಷದ ರಾಜಕೀಯ ಪುಢಾರಿಗಳಿಗೇ ಮೀಸಲಾಗಿ ಪಕ್ಷದ ಬಲವರ್ಧನೆಗೆ ಪ್ರಬಲ ಮಾಧ್ಯಮವಾಯಿತು. ರಾಜ್ಯಸರಕಾರ ಬದಲಾದಂತೆ ಟ್ರಿಬ್ಯೂನಲ್ ಸದಸ್ಯರೂ ಬದಲಾದರು!

(ಮುಂದುವರಿಯುವುದು)

ಉಡುಪಿಯಲ್ಲಿ ಶೋಕ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ, ಲೋಕಸಭಾ ಸದಸ್ಯರೂ ಆಗಿದ್ದ, ಕಾರ್ಮಿಕರ ಮತ್ತು ಜನಸಾಮಾನ್ಯರಿಗೋಸ್ಕರ ನಿರ್ಭೀತಿಯಿಂದ ಹೋರಾಡಿದ ಕಾಂ. ಜ್ಯೋತಿರ್ಮಯ ಬಸುರ ಹಠಾತ್ ನಿಧನಕ್ಕೆ ಸಂತಾಪ ಸೂಚಿಸಲು 13-1-82ರಂದು ಉಡುಪಿಯ ಸರ್ವಪಕ್ಷಗಳ ವತಿಯಿಂದ ಸಂತಾಪ ಸೂಚಕ ಸಭೆ ನಡೆಯಿತು.

ಬಿ. ಜೆ. ಪಿ.ಯ ಜಿಲ್ಲಾಧ್ಯಕ್ಷ ಡಾ॥ ವಿ. ಎಸ್. ಆಚಾರ್ಯ, ಸಿ. ಪಿ. ಐ. ನಾಯಕ ಕಾಂ. ಮೋನಪ್ಪ ಸಾಲಿಯಾನ್, ಸಿ. ಪಿ. ಐ. (ಎಂ)ನ ಕಾಂ. ಡೇವಿಡ್ ಕರ್ಕಡ, ರಾಮ್ ಕೆ. ಕುಂದರ್, ಸಾಧು ಅಮೀನರು ಮಾತನಾಡಿ ಕಾಂ. ಬಸು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಸಿ. ಪಿ. ಐ. (ಎಂ) ಉಡುಪಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಟಿ. ಎಸ್. ಕೋಟ್ಯಾನ್ ವಹಿಸಿದ್ದರು.

ಉಡುಪಿಯ ಅಂಬಾಗಿಲು ಹಂಚಿನ ಕಾರ್ಖಾನೆಗಳಾದ ಭಾರತ್, ನವಜೀವನ್, ಜಯಂತಿ ಮೊದಲಾದ ಕಾರ್ಖಾನೆಗಳ ಕಾರ್ಮಿಕರು ಉಡುಪಿಯ ಪಕ್ಷದ ಕಚೇರಿಯಲ್ಲಿ ನಡೆದ ಸಭೆಗೆ ಆಗಮಿಸಿ ಕಾಂ. ಬಸು ನಿಧನಕ್ಕಾಗಿ ಸಂತಾಪ ವ್ಯಕ್ತಪಡಿಸಿದರು.

ತ್ರಿಶೂಲ್ ಫೋಲ್ಡಿಂಗ್ ಫರ್ನೀಚರ್ ಮತ್ತು ಸೆಂಚುರಿ ಪ್ರೆಸ್ ಮೆಂಟಲ್ಸ್ ಕಾರ್ಮಿಕರು ಕೆಲಸ ನಿಲ್ಲಿಸಿ ಸಭೆ ಸೇರಿ ಕಾಂ. ಜ್ಯೋತಿರ್ಮಯಿ ಬಸು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

●

ಎ.ಐ.ಡಿ.ಡಬ್ಲ್ಯೂ.ಎ. ಸಂಚಾಲಕಿಯಾಗಿ ನಜ್ಮಾ

ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನಗಳು ಸಲ್ಲದು ಎಂದು ವಾದಿಸುವ ಮತಾಂಧರ ವಿರುದ್ಧ ಸಿಡಿದೆದ್ದ ಬಿಜಾಪುರದ ನಜ್ಮಾ ಭಾಂಗಿ ರಾಜ್ಯದ ಪ್ರಗತಿಪರ ಕಣ್ಮಣಿಯಾಗಿದ್ದಾರೆ. ಕುಮಾರಿ ನಜ್ಮಾ ಇದೀಗ ಪ್ರಜಾಪ್ರಭುತ್ವ ಹೋರಾಟಗಳಲ್ಲೂ ಸಕ್ರಿಯರಾಗಲು ಮುಂದೆ ಬಂದಿದ್ದಾರೆ.

16-1-82ರಂದು ಬಿಜಾಪುರದಲ್ಲಿ ಮಹಿಳೆಯರ ಸಭೆ ನಡೆದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಘಟಕವೊಂದನ್ನು ಪ್ರಾರಂಭಿಸಲಾಯಿತು. ಕುಮಾರಿ ನಜ್ಮಾ ಭಾಂಗಿ ಈ ಘಟಕದ ಸಂಚಾಲಕಿಯಾಗಿ ಆಯ್ಕೆಯಾಗಿದ್ದಾರೆ. ಈ ಸಭೆಗೆ ಗುಲಬರ್ಗಾದ ಮಹಿಳಾ ಸಂಘಟನೆಯ ಸಂಚಾಲಕಿ ಕಾಂ. ಶರೀಫಾ ಅವರೂ ಆಗಮಿಸಿದ್ದರು.

●

ಐ.ಎಲ್.ಓ.ಗೆ ಕಾರ್ಮಿಕ ಸಂಘಗಳ ದೂರು

[1ನೇ ಪುಟದಿಂದ]

ಸಾಮೂಹಿಕ ಚೌಕಾಸಿಯ ಹಕ್ಕು ಈ ಎರಡು ಪರಿಕಲ್ಪನೆಗಳಿಗೇ ಎಂತಹ ಆಘಾತವುಂಟುಮಾಡಿದೆಯೆಂದು ಪರೀಕ್ಷಿಸಲು ಐ. ಎಲ್. ಓ. ಪರಿಣತರ ತಂಡವೊಂದನ್ನು ಕಳಿಸಬೇಕೆಂದು ಕೇಳಲಾಗಿದೆ.

ಇತ್ತೀಚಿಗೆ ಕಾರ್ಮಿಕವರ್ಗದ ಸಂಘಟನಾ ಹಕ್ಕುಗಳ ಮೇಲೆ ನಡೆದಿರುವ ಹಲ್ಲೆಗಳ ವಾಸ್ತವಾಂಶಗಳನ್ನು ಮನವಿಯಲ್ಲಿ ಹೇಳಲಾಗಿದೆ. ಸ್ವತಃ ಸರಕಾರ, ಸಾರ್ವಜನಿಕ ವಲಯಗಳ ಆಡಳಿತವರ್ಗಗಳು ಒಪ್ಪಂದಗಳನ್ನು ಮುರಿಯುತ್ತಿರುವುದು, ಕೊಟ್ಟ ಮಾತು ಪರಿಪಾಲಿಸದಿರುವುದು, ಏಕಪಕ್ಷೀಯವಾಗಿ ಒಪ್ಪಂದ ಬದಲಿಸುವುದು, ಕಾರ್ಮಿಕ ವಿವಾದದಲ್ಲಿ ಪೋಲೀಸರ ಮಧ್ಯಪ್ರವೇಶ, ಪೋಲೀಸ್ ಗೋಳಿಬಾರಿನಲ್ಲಿ ಕಾರ್ಮಿಕ ಸಂಘಗಳ ಕಾರ್ಯಕರ್ತರ ಕೊಲೆ, ಕಾನೂನುಬದ್ಧ ಸಂಘಟನಾ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಯಕರ್ತರ ಕೊಲೆ ನಡೆಸುವುದು ಇವನ್ನೆಲ್ಲಾ ಮನವಿಯಲ್ಲಿ ಉಲ್ಲೇಖಿಸಲಾಗಿದೆ. ರೈಲ್ವೇ ಇಲಾಖೆಯಲ್ಲಿ ಶಿಸ್ತಿನ ನೆಪದಲ್ಲಿ ಕಾರ್ಮಿಕ ಸಂಘಗಳ ಸಕ್ರಿಯ ಕಾರ್ಯಕರ್ತರನ್ನು ಬಲಿಹಾಕಲು ಅಧಿಕಾರಿಗಳಿಗೆ ವ್ಯಾಪಕ ಅಧಿಕಾರ ನೀಡಿರುವ ಗುಪ್ತ ಸುತ್ತೋಲೆಗಳ ಬಗೆಗೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮನವಿಯಲ್ಲಿ ಕಾರ್ಮಿಕರ ಮೂಲಭೂತ ಹಕ್ಕುಗಳ ಕುರಿತಾದ ಐ.ಎಲ್.ಓ. ಸಮಾವೇಶಗಳನ್ನು ಭಾರತ ಸರಕಾರ ಇನ್ನೂ ಊರ್ಜಿತಗೊಳಿಸಿಲ್ಲ ಎಂಬುದರ ಕಡೆಗೆ ಐ.ಎಲ್.ಓ.ದ ಗಮನ ಸೆಳೆಯಲಾಗಿದೆ.

ಮನವಿಯ ಅಂತ್ಯದಲ್ಲಿ "ಈ ವಿಷಯದಲ್ಲಿ ಐ.ಎಲ್.ಓ. ತುರ್ತುಕ್ರಮ ಕೈಗೊಂಡು ಭಾರತ ಸರಕಾರ ಈ ಎರಡು ಕ್ರಮಗಳನ್ನು ಕೈಬಿಡುವಂತೆ ಅದರ ಮೇಲೆ ಪ್ರಭಾವ ಬೀರಿ ಭಾರತದ ಕಾರ್ಮಿಕರ ಸಂಘಟನಾ ಹಕ್ಕನ್ನು ರಕ್ಷಿಸುವುದು ಎಂದು ಭಾರತದ ಮಿಲಿಯಗಟ್ಟಲೆ ಕಾರ್ಮಿಕರು ನಿರೀಕ್ಷಿಸುತ್ತಿದ್ದಾರೆ" ಎಂದು ಆಶಿಸಲಾಗಿದೆ.

ಐ.ಎಲ್.ಓ. ಈಗಾಗಲೇ ಕೇಸನ್ನು ದಾಖಲುಮಾಡಿಕೊಂಡಿದೆ (ದಾವೆ ಸಂ. 1050) ನಾವು ಈ ದಾವೆಗೆ ನಮ್ಮ ಬೆಂಬಲ ವ್ಯಕ್ತಪಡಿಸುತ್ತೇವೆ.

ಪಕ್ಷದ ಕಛೇರಿ ಮೇಲೆ ಹಲ್ಲೆ

ಎನ್. ಸಿ. ಸಿ.ಯು ಕರೆಯಂತೆ ಜ. 19ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ದ. ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲೂ ಯಶಸ್ವಿಯಾಗಿ ನಡೆಯಿತು. ತಾಲ್ಲೂಕಿನ ಎಲ್ಲ ಬೀಡಿ ಡಿಪೋಗಳು, ಬೀಡಿ ಬ್ರ್ಯಾಂಚುಗಳು ಸಂಪೂರ್ಣ ಮುಚ್ಚಲ್ಪಟ್ಟಿದ್ದವು. ಬಂಟ್ವಾಳದಲ್ಲಿ ವಾಹನ ಸಂಚಾರವಿಲ್ಲದೇ ರಸ್ತೆಗಳು ನಿರ್ಜೀವವಾಗಿದ್ದವು. ಈ ಮುಷ್ಕರಕ್ಕೆ ದೊರೆತ ಅದ್ಭುತ ಬೆಂಬಲದಿಂದ ಹುಚ್ಚೆದ್ದ ಪೋಲೀಸರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿಗೆ ದಾಳಿಮಾಡಿ ಆಫೀಸಿನಲ್ಲಿದ್ದವರನ್ನು ಥಳಿಸಿ, ಪೀಠೋಪಕರಣಗಳನ್ನು ನಾಶಮಾಡಿ, 12 ಜನರನ್ನು ಬಂಧಿಸಿದ್ದಾರೆ.

ಈ ಬಂಧನವನ್ನು ಪ್ರತಿಭಟಿಸಿ ಸಿ.ಐ.ಟಿ.ಯು.ಗೆ ಸೇರಿದ ನೂರಾರು ಕಾರ್ಮಿಕರು (ಅಧಿಕ ಸಂಖ್ಯೆಯಲ್ಲಿ ಮಹಿಳೆಯರು) ಮೆರವಣಿಗೆ ಹೊರಡಿಸಿ ಬಂಧಿತರನ್ನು ಬಿಡುವಂತೆ ಒತ್ತಾಯಿಸಿ ಸಬ್‌ಇನ್ಸ್‌ಪೆಕ್ಟರಿಗೆ ಘೆರಾವೋ ಮಾಡಿದ್ದರು. ಬಿ. ಸಿ. ರೋಡಿನಲ್ಲಿ ಎ. ಐ. ಟಿ. ಯು. ಸಿ.ಗೆ ಸೇರಿದ ಕಾರ್ಮಿಕರು ಮೆರವಣಿಗೆ ನಡೆಸಿ ಬಂಧಿತರ ಬಿಡುಗಡೆಗೆ ಒತ್ತಾಯಿಸಿದರು.

ಬಂಧಿತರನ್ನು ಸಾಯಂಕಾಲ ಕೋರ್ಟಿಗೆ ಹಾಜರಪಡಿಸಿ ಬಿಡುಗಡೆ ಮಾಡಲಾಯಿತು. ಬಂಧಿತರಲ್ಲಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಬಿ. ವಾಸುಗಟ್ಟಿ, ಬೀಡಿ ಯೂನಿಯನ್‌ನ ಅಧ್ಯಕ್ಷರಾದ ಕಾಂ. ಬಿ. ಎಚ್. ಬಂಗೇರ, ಕಾರ್ಯದರ್ಶಿ ಕಾಂ. ಸಂಜೀವ ಬಂಗೇರ ಮತ್ತು ಕಾಂ. ಮಂಜುನಾಥ ಸಫಲ್ಯ, ರೈತ ಸಂಘದ ಅಧ್ಯಕ್ಷರಾದ ಕಾಂ. ಬಿ. ರುಕ್ಮಯ್ಯ ಪೂಜಾರಿ, ಕಾರ್ಯದರ್ಶಿ ಕಾಂ. ಬಿ. ನಾರಾಯಣ ಸೇರಿದ್ದರು.

ಜ. 20ರಂದು ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ ನೂರಾರು ರೈತ-ಕಾರ್ಮಿಕರು ಬಂಟ್ವಾಳ ಮತ್ತು ಬಿ. ಸಿ. ರೋಡ್‌ನಲ್ಲಿ ಬೃಹತ್ ಮೆರವಣಿಗೆ ನಡೆಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ಬಿ. ವಾಸುಗಟ್ಟಿ, ಬಿ. ಎಚ್. ಬಂಗೇರ ಮತ್ತು ಜನಾರ್ಧನನಾಯಕ್ ಮಾತನಾಡಿ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರು.

ವಿಜಯವಾಡಾದಲ್ಲಿ IIನೇ ಸಮ್ಮೇಳನ ಆರಂಭ

[1ನೇ ಪುಟದಿಂದ]

ಧ್ವಜಾರೋಹಣ ಮಾಡಿದ ಕಾಂ. ಇ. ಎಂ. ಎಸ್. ಅವರು ಮಾತನಾಡುತ್ತಾ "ಈ ಸಮ್ಮೇಳನ ಕೇವಲ ನಮ್ಮ ಪಕ್ಷವಷ್ಟೇ ಅಲ್ಲ; ಇಡೀ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬಲವರ್ಧನೆಗೆ ಸಹಾಯಕವಾಗಲಿದೆ" ಎಂದರು. ಅವರು ಮುಂದುವರೆದು ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಪ್ರಬಲಪಕ್ಷವಾಗಿ ಬೆಳೆದ ಪಕ್ಷದ ಸಾಧನೆಗಳನ್ನು ಸ್ಮರಿಸಿದರು.

ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಪಿ. ಸುಂದರಯ್ಯ ಅವರು ಪ್ರತಿನಿಧಿಗಳನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಕಾಂ. ಹರಿಕಿಷನ್ ಸುರಜೀತ್, ಎಂ. ಆರ್. ವೆಂಕಟ್ರಾಮನ್, ಕನಕ ಮುಖರ್ಜಿ, ಇ. ಕೆ. ನಯನಾರ್, ಎನ್. ಪ್ರಸಾದ್‌ರಾವ್ ಇವರನ್ನೊಳಗೊಂಡ ಅಧ್ಯಕ್ಷಮಂಡಳಿ ಕಲಾಪಗಳನ್ನು ನಿರ್ವಹಿಸಿತು.

ಸಮ್ಮೇಳನ ಆರಂಭವಾಗುವ ಮುನ್ನ ಶ್ರಮಜೀವಿಗಳಿಗೋಸ್ಕರ ದುಡಿದು ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಮ್ಮೇಳನಕ್ಕೆ ವಿಯಟ್ನಾಂ, ಕೊರಿಯಾ, ಕ್ಯೂಬಾ, ರುಮಾನಿಯಾ, ಸ್ವೀಡನ್ ಮತ್ತು ಮಾರಿಷಸ್ ಮೊದಲಾದ ದೇಶಗಳಿಂದ ಅಭಿನಂದನಾ ಸಂದೇಶಗಳು ಬಂದಿವೆ.

(ಸಮ್ಮೇಳನದ ಪೂರ್ತಿ ವಿವರಗಳನ್ನು ಮುಂದಿನವಾರ ಕೊಡಲಾಗುವುದು.)

ಕಾಂ. ಸುಸ್ಲೋವ್ ನಿಧನ

ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಸುಸ್ಲೋವ್ ಹೃದಯಾಘಾತದಿಂದ ನಿಧನರಾದ ವಾರ್ತೆ ಬಂದಿದೆ.

33 ವರ್ಷಗಳಿಂದ ಸೋವಿಯತ್ ಕಮ್ಯುನಿಸ್ಟ್ ಪಕ್ಷದಲ್ಲಿ ಪ್ರಧಾನರಾಗಿದ್ದ ಕಾಂ. ಸುಸ್ಲೋವ್ ನಿಧನರಾದಾಗ 79ವರ್ಷ ವಯಸ್ಸಾಗಿತ್ತು. ಕಾಂ. ಸುಸ್ಲೋವ್ 1947ರಿಂದ ಸಿ.ಪಿ.ಎಸ್.ಯು.ನ ಕಾರ್ಯದರ್ಶಿಯಾಗಿದ್ದರು. ಸಿ. ಪಿ. ಎಸ್. ಯು. ನ ಕೇಂದ್ರಸಮಿತಿಯ ಸದಸ್ಯ ಮತ್ತು ಪೊಲಿಟ್‌ಬ್ಯೂರೋ ಸ್ಥಾನಗಳನ್ನು ಕಾಂ. ಸುಸ್ಲೋವ್ ಅಲಂಕರಿಸಿದ್ದರು.

ಅಪೂರ್ವ ವ್ಯಕ್ತಿತ್ವದ ಕಾಂ. ಸುಸ್ಲೋವ್‌ರ ನಿಧನ ಜಾಗತಿಕ ಕಮ್ಯುನಿಸ್ಟ್ ಚಳುವಳಿಗೆ ಒಂದು ದೊಡ್ಡ ನಷ್ಟ.

ಕಾಂ. ಸುಸ್ಲೋವ್‌ರ ನಿಧನಕ್ಕೆ ಐಕ್ಯರಂಗ ತೀವ್ರ ದುಃಖ ವ್ಯಕ್ತಪಡಿಸುತ್ತದೆ.

ಪ್ರಚಂಡಯಶಸ್ವಿಯಾದ ಸಾರ್ವತ್ರಿಕ ಮುಷ್ಕರ

(6ನೇ ಪುಟದಿಂದ)

ಶಿವಮೊಗ್ಗಾ, ಬೆಳಗಾವಿ, ಗುಲ್ಬರ್ಗಾ ಮೊದಲಾದ ಜಿಲ್ಲೆಗಳಲ್ಲಿ ಮುಷ್ಕರ ಯಶಸ್ವಿಯಾಗಿದೆ. ಕೋಲಾರದಲ್ಲಿ ಕಾಂ. ಆರ್. ವೆಂಕಟರಾಮಯ್ಯ, ಚಿಂತಾಮಣಿಯಲ್ಲಿ ಕಾಂ. ಅಶ್ವಥ ನಾರಾಯಣರೆಡ್ಡಿ, ಹರೀಂದ್ರ, ಲಕ್ಷ್ಮಯ್ಯರೆಡ್ಡಿ, ಚಿಕ್ಕಬಳ್ಳಾಪುರದಲ್ಲಿ ಕಾಂ. ಮುನಿರಾಜು, ಶಿವಪ್ಪ, ಮುನಿಕೃಷ್ಣಪ್ಪ; ನರಸಿಂಹಯ್ಯ, ಬೆಳಗಾಂವನಲ್ಲಿ ಡಾ॥ ವಿಶ್ವನಾಥ ಮೊದಲಾದವರು, ಹರಿಹರದಲ್ಲಿ ಕಾಂ. ಇಕ್ಬಾಲ್ ಹುಸೇನ್, ಎನ್. ಜಿ. ಪಠಾಣ, ಭೀಮಪ್ಪರೆಡ್ಡಿ ಮೊದಲಾದವರು, ಬೀದರ್‌ನಲ್ಲಿ ಕಾಂ. ಸುಂದರರಾಜ್, ಸುಗ್ರಾವರ್ ಮೊದಲಾದವರು, ಸಕಲೇಶಪುರದಲ್ಲಿ ಪೌಲ್ ಡಿಸೋಜ್, ದುಜ, ತನಿಯ ಮೊದಲಾದವರು ಈ ಮುಷ್ಕರ ಸಮಯದಲ್ಲಿ ಬಂಧಿತರಾಗಿದ್ದಾರೆ. ಬೆಳಗಾಂನ ಮತ್ತಿತರ ಕಡೆ ಲಾಠೀಪ್ರಹಾರ ನಡೆದಿರುವ ಘಟನೆ ವರದಿಯಾಗಿದೆ.

ಉ. ಕ. ಜಿಲ್ಲೆಯ ಹಳಿಯಾಳ, ಶಿರಸಿ, ದಾಂಡೇಲಿಗಳಲ್ಲಿ ಮುಷ್ಕರ ಬಂದ್ ಯಶಸ್ವಿಯಾಗಿವೆ. ಹಳಿಯಾಳದಲ್ಲಿ ಕಾಂ. ಉಡಚಪ್ಪಾ ಜೊಬಾಟಿ, ನಂದಕಿಶೋರ್ ಬೊಂಗಾಳೆ, ಎಂ. ಜಿ. ಪಾಟೀಲ್ ಮೊದಲಾದವರು ಬಂಧನಕ್ಕೊಳಗಾಗಿದ್ದರು.

ಧರಣಿ ಸತ್ಯಾಗ್ರಹ

ಲೋಕೋಪಯೋಗಿ ಇಲಾಖೆಯಲ್ಲಿ ರಾಜ್ಯದಲ್ಲಿ 15 ಸಾವಿರ ಕಾರ್ಮಿಕರು ಕೆಲಸಮಾಡುತ್ತಿದ್ದು ಬೆಂಗಳೂರು ಜಿಲ್ಲೆಯಲ್ಲಿ ಸುಮಾರು 2 ಸಾವಿರಕ್ಕೂ ಮೇಲ್ಪಟ್ಟು ಕಾರ್ಮಿಕರು ಎನ್. ಎಂ. ಆರ್. ಕೆಲಸಗಾರರೆಂದು ಪರಿಗಣಿಸಲ್ಪಟ್ಟು ದುಡಿಯುತ್ತಿದ್ದಾರೆ. ಈ ಕಾರ್ಮಿಕರಿಗೆ ಸರಕಾರಿ ನೌಕರರಿಗೆ ದೊರೆಯುವ ಸಂಬಳ, ರಜಾ ಸೌಲಭ್ಯ ಮತ್ತಿತರ ಸೌಲಭ್ಯಗಳು ದೊರಕುತ್ತಿಲ್ಲ. ಈ ಕಾರ್ಮಿಕರಿಗೆ ಕೆಲಸದ ಭದ್ರತೆ, ಅಪಘಾತ ಪರಿಹಾರ ಯಾವುದೂ ಇಲ್ಲ. ದಿನವೊಂದಕ್ಕೆ ಕೇವಲ 6ರೂ. ದಿನಗೂಲಿಯ ಮೇಲೆ ದುಡಿಸುತ್ತಿದ್ದಾರೆ. ಕರಡು ಸಮಿತಿ ಆಜ್ಞೆಮಾಡಿರುವ ಪ್ರಕಾರ 8 ರೂ. ಸಂಬಳವನ್ನು ಕೊಡುತ್ತಿಲ್ಲ.

ಬೆಂಗಳೂರು ಜಿಲ್ಲೆಯ ಎನ್. ಎಂ. ಆರ್. ಕೆಲಸಗಾರರು ಇತ್ತೀಚಿಗೆ ಸಂಘಟಿಸಿಕೊಂಡು ಸಿ. ಐ. ಟಿ.ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರನ್ನು ತಮ್ಮ ಸಂಘದ ಅಧ್ಯಕ್ಷರಾಗಿ, ಮತ್ತು ಕಾಂ. ಆರ್. ಶ್ರೀನಿವಾಸ್‌ರನ್ನು ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಿದ್ದಾರೆ.

ಈ ಕೆಲಸಗಾರರು 22-1-82 ರಂದು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ 'ವಿಧಾನ ಸೌಧ'ದೆದುರು ಧರಣಿ ಸತ್ಯಾಗ್ರಹ ನಡೆಸಿದರು.

ನಂತರ ಲೋಕೋಪಯೋಗಿ ಇಲಾಖೆಯ ಮಂತ್ರಿ ಕಾಗೋಡು ತಿಮ್ಮಪ್ಪನವರನ್ನು ಕಾಂ. ಸೂರ್ಯನಾರಾಯಣರಾವ್, ಶ್ರೀನಿವಾಸ್, ರತ್ನಮ್ಮ ಮತ್ತಿತರನ್ನೊಳಗೊಂಡ ನಿಯೋಗವು ಬೇಟಿಯಾಗಿ ಕಾರ್ಮಿಕರ ಬೇಡಿಕೆಗಳನ್ನು ಕುರಿತು ಚರ್ಚಿಸಿದರು. ಕೆಲಸದ ಭದ್ರತೆ, ಒಂದು ವರ್ಷಕ್ಕೆ ಮೇಲ್ಪಟ್ಟು ಸರ್ವೀಸ್ ಮಾಡಿದವರನ್ನು ವರ್ಕಚಾರ್ಜ ನೌಕರರೆಂದು ಪರಿಗಣಿಸಬೇಕೆಂದು ಒತ್ತಾಯಿಸಿದರು.

ನಿಯೋಗದ ಬೇಡಿಕೆಗಳನ್ನು ಸಹಾನುಭೂತಿಯಿಂದ ಆಲಿಸಿದ ಸಚಿವರು ಫೆಬ್ರವರಿ 3ರಂದು ಮತ್ತೆ ಭೇಟಿಯಾಗಲು ತಿಳಿಸಿದ್ದಾರೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office: L-56, K. V. Temple Street, Sultanpet Bangalore-560 053. Phone-24154
EDITOR: M. K. BHAT